ಪ್ರಚಾರ ಪುಸ್ತಕ ಮಾಲೆ

7

ಹಂಪೆಯ
ಹರಿಹರ

ಡಿ. ಎಲ್. ನರಸಿಂಹಾಚಾರ್

ಪ್ರಸಾರಾಂಗ ★ ಮೈಸೂರು ವಿಶ್ವವಿದ್ಯಾನಿಲಯ ★

ಪ್ರಚಾರ ಪುಸ್ತಕಮಾಲೆ-೨

ಹಂಪೆಯ

ಹರಿಹರ

ಡಿ. ಎಲ್. ನರಸಿಂಹಾಚಾರ್, ಎಂ. ಎ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೮೨

ಮೊದಲನೆಯ ಮುದ್ರಣ : ೧೯೩೯
ಎರಡನೆಯ ಮುದ್ರಣ : ೧೯೪೨
ಮೂರನೆಯ ಮುದ್ರಣ : ೧೯೪೮
ನಾಲ್ಕನೆಯ ಮುದ್ರಣ : ೧೯೫೭
ಐದನೆಯ ಮುದ್ರಣ : ೧೯೬೮
ಆರನೆಯ ಮುದ್ರಣ : ೧೯೭೨
ಏಳನೆಯ ಮುದ್ರಣ : ೧೯೮೩
(೧೦,೦೦೦ ಪ್ರತಿಗಳು)

ಬೆಲೆ : ೨೫ ಪೈಸೆ

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯ ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು ; ೧೧ ಭೌತ ಮತ್ತು ಜೀವವಿಜ್ಞಾನಗಳನ್ನು ಕುರಿತವು ; ಉಳಿದವನ್ನು ಸಾಮಾಜಿಕಶಾಸ್ತ್ರಗಳ ಗುಂಪಿಗೆ ಸೇರಿಸಬಹುದು. ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮಾತಿಗೆ ಮನ್ನಣೆಯಿದೆಯೋ ಅಂಥ ಮಹನೀಯರು ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರಮಾಡಿಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು ; ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು

ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದುಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು ಇ. ಜಿ. ಮೆಕಾಲ್ಪೈನ್
ತಾ॥ ೨೪–೪–೧೯೪೨ ವೈಸ್–ಛಾನ್ಸೆಲರ್

ಅರಿಕೆ

ಹರಿಹರಕವಿಯ ವಿಷಯವಾಗಿ ಮಂಡ್ಯದಲ್ಲಿ ಕೊಟ್ಟ ಎರಡು ಉಪನ್ಯಾಸಗಳನ್ನು ವಿಸ್ತರಿಸಿ ಈ ಪುಸ್ತಕರೂಪವಾಗಿ ಪ್ರಕಟಿಸಿದೆ. ಇದರ ಮುಖ್ಯ ಉದ್ದೇಶ ಹರಿಹರನ ಮತ್ತು ಅವನ ಕಾವ್ಯಗಳ ಪರಿಚಯವನ್ನು ಸಾಮಾನ್ಯರಿಗೂ ತಿಳಿಯುವಂತೆ ಮಾಡಿಕೊಡುವುದು. ಆದಷ್ಟು ಮಟ್ಟಿಗೆ ನನ್ನ ಮಾತುಗಳನ್ನು ಕಡಿಮೆ ಮಾಡಿ ಕವಿಯ ಮಾತುಗಳಿಂದಲೇ ಅವನ ಪರಿಚಯ ಉಂಟಾಗುವಂತೆ ಮಾಡಲು ಇಲ್ಲಿ ಪ್ರಯತ್ನಿಸಿದ್ದೇನೆ. ಇದಕ್ಕಾಗಿ ಅವನ ಕವಿತೆಗಳಿಂದ ಕೆಲವು ಒಳ್ಳೆಯ ಭಾಗಗಳನ್ನು ಎತ್ತಿಕೊಟ್ಟಿದೆ. ಈ ಪುಸ್ತಕ ಸಂಕಲನವೂ ಹೌದು: ವಿಮರ್ಶೆಯೂ ಹೌದು. ಅನುವಾದ ಮಾಡಿರುವ ಪದ್ಯಗಳನ್ನು ಸಾವಧಾನದಿಂದ ಓದಿದರೆ ವಿಮರ್ಶೆಯೂ ಸ್ವಾರಸ್ಯವಾಗುತ್ತದೆ. ಅರ್ಥವನ್ನು ಗ್ರಹಿಸುವುದು ಸುಲಭವಾಗಲೆಂದು ಕೆಲವು ಕಠಿನ ಪದಗಳಿಗೆ ಟಿಪ್ಪಣಿಯನ್ನು ಕೊಟ್ಟಿದೆ. ಈ ಸಣ್ಣ ಪುಸ್ತಕ ರುಚಿಸಿದರೆ ಮುಂದಕ್ಕೆ ಹರಿಹರನ ಕಾವ್ಯಗಳನ್ನು ಇನ್ನೂ ಹೆಚ್ಚಾಗಿ ಓದಲು ಆಸಕ್ತಿ ಹುಟ್ಟಬಹುದು.

ಈ ಪುಸ್ತಕದ ಮೂಲಪ್ರತಿಯನ್ನು ಓದಿ ಅನೇಕ ಸಲಹೆಗಳನ್ನು ಕೊಟ್ಟ ಸಂಪಾದಕ ಮಂಡಲಿಗೂ ಇದನ್ನು ಪ್ರಕಟಿಸಿರುವ ವಿಶ್ವ ವಿದ್ಯಾನಿಲಯಕ್ಕೂ ನಾನು ತುಂಬ ಕೃತಜ್ಞನಾಗಿದ್ದೇನೆ. ಮೊದಲಿನ ಕರಡು ಪ್ರತಿಯನ್ನು ಸಿದ್ಧಮಾಡುವಾಗ ನನ್ನ ತಮ್ಮ ಚಿ॥ ಶಾಮಣ್ಣನಿಂದ ನನಗೆ ಆದ ಸಹಾಯವನ್ನು ಇಲ್ಲಿ ನೆನೆಯದಿರಲಾರೆ.

ಮಹಾರಾಜ ಕಾಲೇಜು, ಮೈಸೂರು — **ಡಿ. ಎಲ್. ಎನ್.**

೧–೧೧–೧೯೩೯

ವಿಷಯಾನುಕ್ರಮಣಿಕೆ

೧. ಜೀವನ

ತುಂಗಭದ್ರಾನದಿಯ ತೋಳಿನ ತೆಕ್ಕೆಯಲ್ಲಿ, ಕಾಡುಕಣಿವೆಗಳ ಹಸುರು ಹೊದಿಕೆಯಲ್ಲಿ, ಬೆಟ್ಟಕೆರೆಗಳ ನಡುವೆ ಮಲಗಿ ಚಿತ್ತಾರ ದಂತೆ ಕಾಣುವ ಹಂಪೆ ಒಂದು ಪುಣ್ಯಕ್ಷೇತ್ರ. ಅಲ್ಲಿ ವಿರೂಪಾಕ್ಷನ ಸಾನ್ನಿಧ್ಯದಿಂದ ಮಹಿಮೆಯುಂಟಾಗಿದೆ. ಪ್ರಕೃತಿಯ ವಿಲಾಸ ದಿಂದ ಸೊಗಸು ಸೂಸುತ್ತಿದೆ. ದೇವರಲ್ಲಿ ಭಕ್ತಿಯುಳ್ಳ ಜನರ ಶಾಂತಿಯುತವಾದ ಜೀವನ ಸಾಗುತ್ತಿದೆ. ಮೂರು ಹೊತ್ತೂ ವಿರೂಪಾಕ್ಷನ ಸೇವೆಗಾಗಿ ಜನರು ಬಂದು ಹೋಗುತ್ತಿದ್ದಾರೆ. ಬೀದಿಯಲ್ಲೆಲ್ಲ ಭಕ್ತರ ಓಡಾಟ. ಊರಿನ ಬದುಕು ಯಾವ ತೊಂದರೆಯೂ ಇಲ್ಲದೆ ಶಾಂತಿಯಿಂದ ಕೂಡಿದೆ, ತೃಪ್ತಿಯಿಂದ ತಣಿದಿದೆ. ಏಳುನೂರು ವರ್ಷಗಳ ಹಿಂದಿನ ಆ ಪಟ್ಟಣದಲ್ಲಿ ನಮ್ಮ ಕದಡಿದ ಮನಸ್ಸು ಒಂದೆರಡು ಗಳಿಗೆಯ ಕಾಲ ಸಂಚರಿಸಲಿ.

ಮೂಡಲದಿಕ್ಕಿನಲ್ಲಿ ಕೆಂಪು ಹರಡುವ ಹೊತ್ತು. ಹೂಗಳ ಕಂಪು ಸೋರಿಹೋಗದಂತೆ ಒತ್ತಾಗಿ ಹೆಣೆದಿರುವ ಹೂಬುಟ್ಟಿ ಯನ್ನು ಕೈಯಲ್ಲಿ ಹಿಡಿದು ಶಿವಸ್ತೋತ್ರವನ್ನು ಮಾಡುತ್ತ ಒಬ್ಬನು ಹೋಗುತ್ತಿದ್ದಾನೆ. ಮತ್ತೆಲ್ಲವನ್ನು ಮರೆತು ಯಾವುದೋ ಒಂದ ರಲ್ಲಿ ಬೆಸೆದಿರುವಂತಿದೆ ಅವನ ಮನಸ್ಸು. ಬಾಯಿತುಂಬ ಧಾರಾ

ನಿನ್ನ ಗೀತಂಗಳಂ ಹರುಷದಿಂ ಪಾಡುತಂ
ನಿನ್ನ ಪದ್ಯಂಗಳಂ ಪುಳಕಿಸುತ್ತೋದುತಂ
ನಿನ್ನವರ ಕೀರ್ತಿಯಂ ೧ಕೈವಾರಿಸುತೆ ಬರುತೆ
ನಿನ್ನವರ ಮೂರ್ತಿಯಂ ನೆನೆದು ಕರಗುತೆ ಬರುತೆ

---

೧ ಕೈವಾರಿಸುತೆ = ಹೊಗಳುತ್ತ.

ಕಾರವಾಗಿ ಶಿವಗೀತಗಳು ಉಕ್ಕಿಬರುತ್ತಿವೆ. ಶಿವನನ್ನು ಕುರಿತು "ನಿನ್ನ ಸೇವೆಯ ಪುಣ್ಯ ಎಂದಿಗೆ ಬರುತ್ತದೊ" ಎಂದು ಬೇಡುತ್ತ ಹಾಡುತ್ತ ಅವನು ಮುಂದೆ ಮುಂದೆ ಮೆಲ್ಲಮೆಲ್ಲಗೆ ಹೋಗು ತ್ತಿದ್ದಾನೆ. ಅವನು ಹೊರಟಿರುವುದು ಹೂವಿನ ತೋಟದ ಕಡೆಗೆ; ಶಿವಾರ್ಚನೆಗೆ ಬೇಕಾದ ಪತ್ರಪುಷ್ಪಗಳನ್ನು ತರುವುದಕ್ಕಾಗಿ. ಎದುರಿನಲ್ಲಿ 'ಸೌರಭದ ಸಂದಣಿಯೆನಿಪ' ಕಂಪಿನ ತವರ್ಮನೆ ಯಾದ ಹೂವಿನ ತೋಟ ದೂರದಲ್ಲಿ ಕಾಣುತ್ತಿದೆ. ಅದರ ನೋಟ ಅವನಲ್ಲಿ ಪರಮಾನಂದವನ್ನುಂಟುಮಾಡಿ ಕುಣಿಯುವಂತೆ ಮಾಡಿದೆ: ಬಿಲ್ವ ಕಕ್ಕೆ ಮುಂತಾದ ಪತ್ರೆಗಳನ್ನು ಬೇಗಬೇಗನೆ ಬಿಡಿಸಿ ಬುಟ್ಟಿಗೆ ತುಂಬುತ್ತಿರುವನು. ಅವನು ಮುಂದೆ ನಡೆದು ಹೂದೋಟವನ್ನು ಹೊಕ್ಕು:

[೧]ತೂಗಾಡುತೊನೆದಾಡುತಾಹಾ ವಿರೂಪಾಕ್ಷ
ಹೂಗಳಂ ನಡೆ ನೋಡುತಾಹಾ ವಿರೂಪಾಕ್ಷ
ಎನುತೆ ಹಿಗ್ಗುತ್ತೆ [೨]ಹೊಂಗುತ್ತೆ ಹೊಮ್ಮುತ್ತುಲಿದು
ಎನಗಿಂತು ಕರುಣಿಸುವನೇ ಸದಾಶಿವನೆಂದು

ಮೈತುಂಬ ಹೂವು ಬಿಟ್ಟು ಹಬ್ಬಿರುವ ಹೂಗಿಡಗಳನ್ನೂ ಬಳ್ಳಿ ಗಳನ್ನೂ ನೋಡುವನು. ಅವುಗಳ ಸೊಗಸು ಅವನ ಮನಸ್ಸನ್ನು ಸೂರೆಗೊಂಡು ಈಶ್ವರನ ಮಹಿಮೆಯನ್ನು ಸಾರುವಂತೆ ಕಾಣು ತ್ತಿತ್ತು. ಒಂದೊಂದು ಬಳ್ಳಿಯ ಹತ್ತಿರ ಅವನು ನಿಂತು ಕೂಗಿ ಕರೆದು ಬೇಡಿ, "ತಾಯೇ ಶಿವನ ಅರ್ಚನೆಗೆ ಹೂವನ್ನು ಕೊಡು" ಎಂದು ಕೈಚಾಚುತ್ತಾನೆ. ಇರುವಂತಿಯ ಹೂವನ್ನು ಬಿಡಿಸಿ ಕುಣಿದಾಡುತ್ತ ಬಂದು ಸಂಪಿಗೆಯ ಮರದ ಹತ್ತಿರ ನಿಂತು

---

೧ ತೂಗಾಡುತೆ + ಒನೆದಾಡುತೆ; ಒನೆ = ತೂರಾಡು.
೨ ಹೊಂಗುತ್ತೆ = ಉಬ್ಬುತ್ತ.

ಏನವ್ವ ಸಂಪಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಹೊಸಕುಸುಮವಂ ನೀಡು ನೀಡೆಂದು
೧ಅಳಿಮನದ ಪರಿಯೆಂದು ಬಗೆಯದಿರು ನೀನೆನುತ
ತಿಳಿದು ಹೊಸ ಹೂಗಳಂ ನೀಡವ್ವ ನೀಡೆನುತ

ಆ ಹೂವುಗಳನ್ನು ಆರಿಸಿಕೊಂಡು, ಕುಂಕುಮದ ತಾರೆಗಳಂತಿರುವ ಸೇವಂತಿಗೆಯನ್ನೂ ಮಲ್ಲಿಗೆ ಮಾಧವೀ ಪುಷ್ಪಗಳನ್ನೂ ಮನವಾರೆ ಬಿಡಿಸಿ, ಜಾಜಿಯ ಹೂವನ್ನು ಬುಟ್ಟಿಗೆ ತುಂಬಿ, ಮುಂದೆ ಮಗ ಮಗಿಸುವ ಕೇದಗೆಯ ಹೂವಿರಲು :

ಹೊಱಗೆ ಮುಳ್ಳೊಳಗೆ ಕಂಪಕ್ಕಕ್ಕು ನಿನ್ನ ಪರಿ
೨ಹೆಱೆಸೂಡಿದನ ಗುಪ್ತಭಕ್ತನಂತಿರ್ಪ ಪರಿ
ಆಹ ದೆಸೆದೆಸೆಗೆ ಬೀಱುವ ಸುಗಂಧದ ಸೂಱೆ
ಆಹ ಕೇತಕಿ ನಿನ್ನ ಪರಿಮಳದ ಪರಿ ಬೇಱೆ
ಪರಿಮಳಂ ಸುಳಿಗೊಂಡು ಬೆಳೆದು ೩ಕವಲಿಱಿಯಿತೋ
೪ಉರವಣಿಸಿ ಬೆಳೆದ ಪರಿಮಳಕೆ ಗಱಿ ಮೂಡಿತೋ

ಎಂದು ಅಚ್ಚರಿಪಡುತ್ತ ಆ ಹೂವನ್ನು ಕೊಯ್ದು, ಸುರಹೊನ್ನೆಯನ್ನು ಬಿಡಿಸಿಕೊಂಡು, ಮೊಲ್ಲೆಯನ್ನು ಮುದ್ದಾಡಿ ಮನ್ನಿಸಿ ಮಾತನಾಡಿ, ಕಂಪಿನಲ್ಲಿ ಮುಳುಗಿ ಮೂಡಿದ ದವನದ ಬಳಿ ತಂಗಿ :

ದವನವೇ ಶಿವನ ಪರಿಮಳದ ಹಬ್ಬವೆ ಬಾರ
ಭುವನದೊಳು ನಿನಗೆ ಸರಿಯಿಲ್ಲ ಸೌರಭಸಾರ

---

೧ ಅಳಿಮನದ = ದುಂಬಿಯ ಮನಸ್ಸಿನ, 'ಹೀನಮನಸ್ಸಿನ' ಎಂದೂ ಆಗುತ್ತದೆ. ದುಂಬಿಗೂ ಸಂಪಿಗೆಗೂ ದ್ವೇಷ ಎಂದು ಕಾವ್ಯದಲ್ಲಿ ಸಂಕೇತ ಇದೆ. ೨ ಹೆಱೆಸೂಡಿದನ = ಅರ್ಧಚಂದ್ರನನ್ನು ಮುಡಿದವನ ಎಂದರೆ ಶಿವನ. ೩ ಕವಲಿಱಿ = ಕವಲಾಗಿ ಒಡೆ. ೪ ಉರವಣಿಸಿ = ಶೀಘ್ರವಾಗಿ, ಹೆಚ್ಚಾಗಿ.

ಎಂದು ಕುಣಿಯುತ್ತ ಕೂಗುತ್ತ ಹೂಗೊಳಕ್ಕೆ ಬಂದು ಕಮಲವನ್ನೂ ನೆಯ್ದಿಲೆಯನ್ನೂ ತೆಗೆದುಕೊಂಡು ಒಂದೊಂದು ಜಾತಿಯ ಹೂವನ್ನೂ ಒಂದೊಂದು ರಾಶಿಮಾಡಿ :

ಆಹ ಭಾಗ್ಯವೆ ಶಿವನನಿವಱ್ಕೊಳರ್ಚಿಸ ಪಡೆದೆ

ಎಂದು ನಿರ್ಮಳಸ್ಥಾನವನ್ನು ನೋಡಿ, ಮಾವಿನ ಮರದ ಕೆಳಗೆ ಬಾಳೆಲೆ ಹಾಸಿ, ಬುಟ್ಟಿಯ ಹೂಗಳನ್ನು ಮೆಲ್ಲಗೆ ಸುರಿದು ಅವನು ಹಾರವನ್ನು ಕಟ್ಟುತ್ತಿರುವನು. ಕೈ ಮುಟ್ಟಿದರೆ ಅವು ಕೆಡುತ್ತವೆಂದು ಮನಮುಟ್ಟಿ ಕಟ್ಟುತ್ತ, ಕೈ ತಪ್ಪಿ ಕೆಳಗೆ ಬಿದ್ದರೆ ಸಂಕಟಪಡುತ್ತ, ನೋಡಿದರೆ ಎಲ್ಲಿ ಹೂ ಬಾಡುವುದೋ ಎಂದು ಕಣ್ಣು ಮುಚ್ಚುತ್ತ ಹೂವನ್ನು ಪೋಣಿಸುವುದರಲ್ಲಿ ಅವನು ನಿರತನಾಗಿದ್ದಾನೆ.

ಇಷ್ಟು ಹೊತ್ತಿಗೆ ಎಚ್ಚರಗೊಂಡ ತುಂಬಿಗಳು ಹೂವಿನ ತೋಟಕ್ಕೆ ಬಂದು ನೋಡುತ್ತವೆ, ಅಲ್ಲಿ ಯಾವ ಹೂವೂ ಇಲ್ಲ. ಅವು ನಿರಾಸೆಯನ್ನು ಹೊಂದಿ ಪರಿಮಳದ ದಾರಿ ಹಿಡಿದು ಝೇಂಕರಿಸುತ್ತ ಬಂದು ಅವನ ಮುಂದೆ ಮೊರೆಯುತ್ತ ಹೆದರಿಸುವಂತೆ ಹಾರಾಡುತ್ತಿರಲು ಅವನು :

ಬೇಡವೆಲೆ ೧ಹಂಪೆಯರಸನ ಕುಮಾರಂ ೨ಸಿತಗ.
ನಾಡಂಬರಂಗಳಂ ೩ಕೊಳ್ಳನಾಱಿಡಿಗೆಸಗ—
ನಳಿಯಾಸೆ ಬೇಡ ನಿಮಗಿಲ್ಲಿ ಸೋಲ್ವವರಿಲ್ಲ
ಗಳಗಳನೆ ಬಂದಂತೆ ಮರಳಿ ತುಂಬಿಗಳೆಲ್ಲ

---

೧ ಹಂಪೆಯರಸನ ಕುಮಾರಂ ಎಂದರೆ ಇಲ್ಲಿ ಹರಿಹರ. ೨ ಸಿತಗನ್ = ತುಂಟ ; ಸಾಧುವಲ್ಲದವನು. ೩ ಕೊಳ್ಳನ್ + ಅಱಿಡಿಗೆ + ಎಸಗ ; ಕೊಳ್ಳನ್ = ಲೆಕ್ಕಿಸನು ;. ಅಱಿಡಿಗೆ = ಹಿಂಸೆಗೆ, ತೊಂದರೆಗೆ : ಎಸಗನ್ = ಮಾಡನು.

ಎಂದು ಸಂಪಗೆಯ ಹೂವನ್ನೆಸೆಯಲು ದುಂಬಿಗಳೆಲ್ಲ ಓಡಿ ಹೋದುವು.

ಅನಂತರ ಅವನು ಶಿವನ ದೇವಾಲಯಕ್ಕೆ ಬಂದು, "ಶಿವಾ ಎದ್ದೆಯಾ, ನಾನು ಬರುವುದು ತಡವಾಯಿತೇ, ಇಗೋ ಹೊಸ ಹೂಗಳನ್ನು ತಂದಿದ್ದೇನೆ, ತಂದೆ" ಎಂದು ಬಿನ್ನಯಿಸಿ ಹತ್ತಿರ ಬಂದು ಸೇವಂತಿಗೆಯ ಪನ್ನೀರಿನಿಂದ ಮುಖ ತೊಳೆದು ಪರಾಗ ದಿಂದ ವಿಭೂತಿಯಿಟ್ಟು ದೃಷ್ಟಿಯಾದೀತೆಂದು ಮನಸ್ಸಿನಲ್ಲಿಯೇ ತೂಪಿರಿದು ಜಡೆಗಳನ್ನು ನೋಯದಂತೆ ಮೆಲ್ಲನೆ ಬಾಚಿ ಕೇದಗೆಯ ಎಸಳನ್ನು ನಯವಾಗಿ ಸೆಕ್ಕಿಸಿ ಇರುವಂತಿಯನ್ನು ಮುಡಿಸಿ ಮಲ್ಲಿ ಗೆಯ ಸುಗಂಧವನ್ನು ಮೈಗೆ ಬಳಿದು, ಇನ್ನೂ ಇತರ ಹೂಗಳಿಂದ ಕಂಠಮಾಲೆ ನಾಗಕುಂಡಲ ಮೊದಲಾದ ಒಡವೆಗಳನ್ನು ಮಾಡಿ ತೊಡಿಸಿ, ಚಾಮರ ಬೀಸಿ ಆರತಿಯೆತ್ತಿ ನೈವೇದ್ಯ ಸಮರ್ಪಿಸಿ ತಾಂಬೂಲವನ್ನು ಕೊಟ್ಟು ದೂರನಿಂತು ತನ್ನಿಂದ ಅಲಂಕಾರ ಮಾಡಿಸಿಕೊಂಡ ವಿರೂಪಾಕ್ಷನ ದಿವ್ಯ ಮೂರ್ತಿಯನ್ನು ನೋಡು ತ್ತಾನೆ. ಭಕ್ತಿ ತೊರೆತೊರೆಯಾಗಿ ಚಿಮ್ಮಿ ಕಂಪಿಸುತ್ತ ಪುಳಕಿಸುತ್ತ ಕಣ್ಮುಚ್ಚಿ ಕರಗುತ್ತ :

> ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ
> ಮುಕ್ತಿಪದದಿಂದಧಿಕವಿದಕೆ ಪಡಿಯಿಲ್ಲೆನಿಸಿ
> ಉರವಣೆಯ ಪರಮಭಕ್ತಿಯ ಸುಖದ ಸೊಕ್ಕೇಱಿ

ಹರನ ಮೂರ್ತಿ ಕರಣಗಳಲ್ಲಿ ಕಾಲೂರಲು, ಆನಂದಸುಧೆಯ ಸವಿ ತಲೆಗೇರಲು ಗದ್ಗದ ಹುಟ್ಟಿ ವಿರೂಪಾಕ್ಷ ಎಂದು ಹೇಳು ವಾಗ ನಾಲಗೆ ತೊದಲಿ, ಪ್ರತಿಯೊಂದು ಅಕ್ಷರ ಹೊರಟಾಗ ರೋಮಾಂಚ ಮೂಡಿ ಅವನು ಪರವಶನಾಗಿದ್ದಾನೆ; ಆನಂದ ಬಾಷ್ಪ ಸುರಿಯುತ್ತಿದೆ. ಬಾಯಿಂದ :

ನೆನಹು ನಿನ್ನೊಳು ಹೊಗಲು ಚಿತ್ತವೆರಡಿಲ್ಲೆನಿಸಿ
ನಿನ್ನ ನಿಜವೆನ್ನ ಜೀವನ ೧ನಿಂಬುಗೊಂಡಿರಲು
ನಿನ್ನ ರೂಪೆನ್ನ ಕಂಗಳನಿಂಬುಗೊಂಡಿರಲು
ನಿನ್ನಂಗವೆನ್ನ ಸರ್ವಾಂಗಮಂತೀವಿರಲು

"ದೇವ, ,ನಿನ್ನನ್ನಗಲದ ಮನಸ್ಸನ್ನು ಕರುಣಿಸು" ಎಂಬ ದೈನ್ಯ ವಾಣಿ ಹೊಮ್ಮುತ್ತಿದೆ. ಭಕ್ತಿಯ ಭರದಲ್ಲಿ ಈ ಲೋಕದ ಅರಿವು ಅಳಿದು ಆನಂದದ ಕಡಲಿನಲ್ಲಿ ಅವನ ಮನಸ್ಸು ತೇಲುತ್ತಿದೆ. ಶಿವನ ಕರುಣೆಗೆ ಪಾತ್ರನಾದ ಈತನು ಯಾರಿರಬಹುದು? ಅವನೇ ಹಂಪೆಯ ಹರಿಹರ, ಹರಿಯಣ್ಣ, ಹರಿದೇವ!

ಅವನ ಮೂರ್ತಿಯಲ್ಲಿ ಅಪೂರ್ವವಾದ ಕಳೆ ಕಾಣುತ್ತದೆ. ಹರೆಯದ ಮೈಕಟ್ಟು ಹೋಗಿ ಸ್ವಲ್ಪ ಸಡಿಲಿದೆ ದೇಹ. ಜೀವನದ ಸಂಕಷ್ಟಗಳನ್ನು ಧೈರ್ಯದಿಂದ ತಾಳಿ ಸುಕ್ಕಿದೆ ಅವನ ಮುಖ ಮಂಡಲ, ಆದರೂ ಶಿವಕಳೆ ತುಂಬಿರುವ ಮೂರ್ತಿ. ಹರಿಹರನು ವಿರೂಪಾಕ್ಷನಲ್ಲಿ ಆತ್ಮಾರ್ಪಣೆ ಮಾಡಿ ಭಕ್ತನಾಗುವುದಕ್ಕೆ ಮುಂಚೆ ಬದುಕಿನ ಭಾರದಿಂದ ಕಂಗೆಟ್ಟಿದ್ದನೆಂದು ಕಾಣುತ್ತದೆ. ಕಷ್ಟ ದಲ್ಲಿಯೇ ಬೆಳೆದು ಯೌವನ ಬಂದಾಗ ತಾಯ್ತಂದೆಗಳು ಉಪಾಯ ಮಾಡಿ ಕೊರಳಿಗೆ ಕಣ್ಣಿಯನ್ನು ತೊಡಿಸುವಂತೆ ಯಾವಳೋ 'ದೈತೆಯಂ ತಂದೊಬ್ಬಳಂ ಮದುವೆಯಂ ಮಾಡೆ' ನಾಯಿಯು ಹಾಲನ್ನು ಕುಡಿದಂತೆ, ಪಿತ್ತ ತಲೆಗೇರಿದಂತೆ ಬದುಕಬೇಕಾಗುತ್ತದೆ, ಈ ನಡುವೆ 'ಶಂಕರಾ, ಶಶಿಧರಾ ಕರುಣಿಸಾ' ಎಂದು ಒಂದೊಂದು ಸಲ ಶಿವನ ನೆನಪು ಬರುತ್ತದೆ ಅವನ ಮನಸ್ಸಿಗೆ. ಜೀವನೋ ಪಾಯಕ್ಕೆ ಮಾರ್ಗ ಕಾಣದೆ ಸಂಸಾರ ನಡೆಸುವುದಕ್ಕೆ ಏನೂ

---

೧ ಇಂಬುಗೊಳ್ಳು = ಅವಕಾಶವನ್ನು ಪಡೆ, ಆಕ್ರಮಿಸು.

ಸಿಕ್ಕದೆ ಬರಿಗೈಯಲ್ಲಿ ಮನೆಗೆ ಬಂದಾಗ ಮಕ್ಕಳು ಸುತ್ತ ಮುತ್ತಿಕೊಂಡು "ತಿನ್ನುವುದಕ್ಕೆ ಏನು ತಂದೆ, ಅಪ್ಪಾ" ಎಂದು ಕಾಡುತ್ತಿದ್ದದ್ದು ಹರಿಹರನಿಗೆ ಬಹಳ ಸಂಕಟವನ್ನುಂಟುಮಾಡಿರಬೇಕು. ಅವನು ಆರಂಬವನ್ನು ಕೈಕೊಳ್ಳುತ್ತಾನೆ. ಅಲ್ಲಿ ಏನೂ ದೊರೆಯದೆ ವ್ಯಾಪಾರ ಮಾಡುವ ಪ್ರಯತ್ನದಲ್ಲಿ ಮೂಲಹಣವೂ ಲಾಭವೂ ಕೈಹತ್ತದೆ ಹೋಗುತ್ತವೆ. ಸೇವಾವೃತ್ತಿಗೆ ಮನಸ್ಸು ಮಾಡಿ ಅದರ ನಿಷ್ಠುರತೆಯನ್ನೆಲ್ಲ ಅನುಭವಿಸಿ, ಹೇಳಿದ ಕೆಲಸ ಮಾಡುತ್ತ ನಡುರಾತ್ರಿ ಹತ್ತುಗಾವುದ ಹೋಗೆಂದರೆ ಹೋಗಿ ಕಷ್ಟಪಟ್ಟು ಕಾರ್ಪಣ್ಯದಿಂದ ಬಳಲಿದ್ದಾನೆ ಅವನು. ಯಾವ ಉಪಾಯದಿಂದಲೂ ಸಾಕಷ್ಟು ಹಣ ದೊರೆಯದು. ಇಷ್ಟು ಹೊತ್ತಿಗೆ ಹರೆಯ ಜಾರಿ ಮುಪ್ಪು ಕಾಲಿಡುತ್ತದೆ. ಜತೆಗೆ ಬಡತನ ಬೇರೆ. ಆದರೆ ಕಷ್ಟದ ಹೊತ್ತಿನಲ್ಲಿ ಅವನು ಶಿವನನ್ನು ಮರೆತಿರಲಿಲ್ಲ. ದುಃಖಮಯವಾದ ಈ ಬದುಕಿನಲ್ಲಿ ಅವನಿಗೆ ಬೇಸರ ಹುಟ್ಟಿ ಶಾಶ್ವತ ಸುಖವನ್ನು ಕೊಡುವವನು ಶಿವನೊಬ್ಬನೇ ಹೊರತು ಬೇರೆ ಯಾರೂ ಅಲ್ಲ ಎಂಬ ನಂಬಿಕೆ ಬಲಿತು ಅವನು ಈಗ ಭಕ್ತಶ್ರೇಷ್ಠನಾಗಿದ್ದಾನೆ. ದಿನದಿನವೂ ಹೂಗಳನ್ನು ತರುವುದು, ಶಿವನಿಗೆ ಅಲಂಕಾರ ಮಾಡುವುದು, ಹಾಡಿ ಕುಣಿದಾಡಿ ಸ್ತೋತ್ರ ಮಾಡುವುದು, ಭಕ್ತಿಯ ಪರಮಸುಖದಲ್ಲಿ ಮುಳುಗುವುದು, ಆವೇಶಗೊಂಡು ಶಿವಶರಣರ ಕಥೆಗಳನ್ನು ಕನ್ನಡದಲ್ಲಿ ಹಾಡುವುದು, ಆ ಹಾಡಿನಲ್ಲಿ ತನ್ನನ್ನು ತಾನು ಮರೆಯುವುದು—ಇದು ಹರಿಹರನ ಜೀವನದ ದೃಶ್ಯ.

ಹೀಗೆ ಹಾಡಿದ ಕವಿತೆಗಳಲ್ಲಿ ಗಿರಿಜಾಕಲ್ಯಾಣ, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ, ಶಿವಶರಣರ ರಗಳೆಗಳು ಈ ವರೆಗೆ ದೊರೆತಿವೆ. ಎಲ್ಲ ಕೃತಿಗಳೂ ಹರಿಹರನ ಭಕ್ತಹೃದಯ

ದಿಂದ ಮೂಡಿಬಂದುವು. ಅವನ ಪಾಲಿಗೆ ಕಾವ್ಯ ಶಿವನನ್ನು ಒಲಿಸು ವುದಕ್ಕೆ ಸಾಧನ. ತಾನು ಅನುಭವಿಸಿದ ಭಕ್ತಿಯ ಪರಮಸುಖ ವನ್ನು ಅದರ ತುಂಬ ಹರಿಯಿಸಿದ್ದಾನೆ. ಶಿವನ ಮಹಿಮೆಯನ್ನೂ ಅವನ ಲೀಲೆಗಳನ್ನೂ ಅವನ ಕರುಣೆಯನ್ನೂ ಬಗೆಬಗೆಯಾಗಿ ಹಾಡಿ ನಲಿದಿದೆ ಅವನ ಹೃದಯ. ಅವನ್ನು ಓದುವವರಿಗೂ ಆ ಭಕ್ತಿಯ ಅನುಭವ ತಾನಾಗಿಯೇ ಉಂಟಾಗುತ್ತದೆ. ಅವ ನಂತೆಯೇ ಅವರ ಹೃದಯ ಆನಂದದಿಂದ ನೃತ್ಯಮಾಡುತ್ತದೆ.

ಈ ಕಾವ್ಯಗಳ ಸೊಗಸನ್ನು ಅವುಗಳ ವಸ್ತು, ಪಾತ್ರ, ಶೈಲಿ, ವರ್ಣನೆ ಮುಂತಾದುವುಗಳನ್ನು ವಿಮರ್ಶಿಸಿದರೆ ತಿಳಿಯಬಹು ದಾಗಿದೆ. ಅವನ್ನು ಒಂದೊಂದನ್ನಾಗಿ ತೆಗೆದುಕೊಂಡು ವಿಸ್ತಾರ ವಾಗಿ ನಿರೂಪಣೆ ಮಾಡುವುದು ಈ ಸಣ್ಣ ಪುಸ್ತಕದಲ್ಲಿ ಸಾಧ್ಯ ವಲ್ಲದ ಕೆಲಸ. ಅವನ ಕವಿತೆಯ ಪರಿಚಯವನ್ನೂ ಕಾವ್ಯಗಳ ಮೇಲ್ಮೆಯನ್ನೂ ರುಚಿ ತೋರಿಸಿ ಮುಂದಕ್ಕೆ ಇನ್ನೂ ಬೇಕೆಂಬ ಬಯಕೆ ಹುಟ್ಟುವಂತೆ ಮಾಡಿದರೆ ಸಾಕು.

೨. ಗಿರಿಜಾ ಕಲ್ಯಾಣ

ಈ ಕಾವ್ಯವನ್ನು ಕವಿ ಏತಕ್ಕೆ ಬರೆದನೆಂಬುದನ್ನು ಹೇಳುವ ಒಂದು ಕಥೆ ಎಲ್ಲರಿಗೂ ಗೊತ್ತು.[೧] ರಗಳೆಯ ಮಟ್ಟಿನಲ್ಲಿ ಹರಿಹರ ಕಾವ್ಯ ಬರೆದದ್ದರಿಂದ ಅವನನ್ನು ಪಂಡಿತ ಕವಿಗಳು "ರಗಳೆಯ ಕವಿ" ಎಂದು ಹೀಯಾಳಿಸಿದರಂತೆ. ಅಪಹಾಸ್ಯಕ್ಕೆ ಗುರಿಯಾದೆ ನಲ್ಲಾ ಎಂದು ಮರುಗಿ ಕೆರಳಿ 'ಗಿರಿಜಾಕಲ್ಯಾಣ'ವನ್ನು ಚಂಪೂ ಶೈಲಿಯಲ್ಲಿ ಬರೆದು ತನ್ನ ಸಾಮರ್ಥ್ಯವನ್ನು ಅವನು ಪ್ರಕಟಿಸಿದ ನಂತೆ. ಈ ಕಥೆಯನ್ನು ನಿಜವೆಂದು ಭಾವಿಸಿದರೆ ರಗಳೆಗಳನ್ನು ಬರೆದ ಮೇಲೆಯೇ ಕವಿ 'ಗಿರಿಜಾಕಲ್ಯಾಣ'ವನ್ನು ಬರೆದನೆಂದು ಹೇಳಬೇಕಾಗುತ್ತದೆ. ಆದರೆ ಇದಕ್ಕೆ ಬೇರೆ ಯಾವ ಆಧಾರವೂ ಸಿಕ್ಕುವುದಿಲ್ಲ. ಈಗಿನ ಮಟ್ಟಿಗೆ 'ಗಿರಿಜಾಕಲ್ಯಾಣ'ವನ್ನು ಮೊದ ಲನೆಯ ಕೃತಿಯೆಂದು ಭಾವಿಸಿ ಅದರ ಪರಿಚಯಕ್ಕೆ ತೊಡಗ ಬಹುದು.

ಈ ಕಾವ್ಯದ ಕಥೆ ಹೊಸದೇನೂ ಅಲ್ಲ. ಹರಿಹರನಿಗಿಂತ ಹಿಂದೆ ಎಷ್ಟೋ ಜನ ಕವಿಗಳು ಈ ವಸ್ತುವನ್ನು ಕುರಿತು ಕಾವ್ಯಗಳನ್ನು ಬರೆದಿದ್ದಾರೆ. ಪುರಾಣಗಳಲ್ಲಿಯೂ ಈ ಕಥೆ ವಿಸ್ತಾರವಾಗಿ ನಿರೂಪಿತವಾಗಿದೆ. ಒಂದೊಂದು ಪುರಾಣದಲ್ಲಿ ಒಂದೊಂದು ರೀತಿಯಾದ ಕಥೆ ಕಂಡುಬರುತ್ತದೆ. ಎಲ್ಲೆಡೆಯೂ ಪಾರ್ವತಿಯ ವಿವಾಹವೇ ಮುಖ್ಯವಾದ ಅಂಶವಾಗಿದ್ದರೂ ಇತರ ಕೆಲವು ವಿಷಯಗಳಲ್ಲಿ ವ್ಯತ್ಯಾಸಗಳಿವೆ. ಹರಿಹರನು ಯಾವ ಕಥೆಯನ್ನು ಅವಲಂಬಿಸಿದ್ದಾನೆಂದು ಹೇಳುವುದು ಕಷ್ಟ. ಲಿಂಗಮಹಾಪುರಾಣ

---

೧ ರಗಳೆ ಎಂದರೆ ಏನು ಎಂಬುದನ್ನು ಮುಂದೆ ಹೇಳಿದೆ. ಪುಟ ೩–೩೪೩.

ದಲ್ಲಿಯೂ ಶಿವಪುರಾಣದಲ್ಲಿಯೂ ಈ ಕಥೆ ಇದೆ. ಕಾಳಿದಾಸನ ‘ಕುಮಾರಸಂಭವ’ವೂ ಉದ್ಭಟದೇವನ ‘ಕುಮಾರಸಂಭವ’ವೂ ಹರಿಹರನಿಗಿಂತ ಪ್ರಾಚೀನವಾಗಿದ್ದು ಇದೇ ಕಥೆಯನ್ನು ನಿರೂಪಿಸಿವೆ. ಹರಿಹರನು ಹಳೆಯ ಕಥೆಯನ್ನೇ ತೆಗೆದುಕೊಂಡಿದ್ದರೂ ತನ್ನವೇ ಆದ ಕೆಲವು ಮಾರ್ಪಾಡುಗಳನ್ನು ಅಲ್ಲಲ್ಲಿ ಮಾಡಿದ್ದಾನೆ. ಕೆಲವೆಡೆ ಕಾಳಿದಾಸನ ಪ್ರಭಾವ ಇರುವಂತೆ ಕಾಣುತ್ತದೆ. ಆದರೂ ಅವನ ಕಾವ್ಯ ನವ್ಯವಾಗಿದೆ. ಇದಕ್ಕೆ ಕಾರಣ ಹೊಸ ಸಂದರ್ಭಗಳ ಸೃಷ್ಟಿ ಮತ್ತು ಕಥೆ ಹೇಳುವ ಹೊಸ ರೀತಿ.

ಹರಿಹರನು ಪಾರ್ವತಿಯನ್ನು ಕಥಾನಾಯಿಕೆಯನ್ನಾಗಿ ಮಾಡಿದ್ದಾನೆ. ಕಥೆ ನಡೆಯುವುದು ಅವಳಿಗಾಗಿಯೇ. ಆದ್ದರಿಂದ ಹರಿಹರನ ದೃಷ್ಟಿ ಬೇರೆಯಾಗಿದೆ. ಪಾರ್ವತಿಯ ಜನನ, ಯೌವನ ಪ್ರಾಪ್ತಿ, ನಾರದನ ಆಗಮನ, ಶಿವನ ತಪೋವನಕ್ಕೆ ಅವಳು ತೆರಳುವುದು, ತನ್ನ ಇಷ್ಟಾರ್ಥವನ್ನು ನೆರವೇರಿಸಲು ಬಂದ ಮನ್ಮಥ ರತಿಯರಲ್ಲಿ ಸಹಾನುಭೂತಿ, ಕಾಮದಹನದಿಂದ ಕಂಗೆಟ್ಟ ರತಿಗೆ ಅಭಯಪ್ರದಾನ ಮಾಡುವುದು, ಶಿವನನ್ನು ತಾನಿದ್ದ ಸ್ಥಳಕ್ಕೆ ಬರಿಸುವ ಛಲ, ವಟುವೇಷಧಾರಿಯಾಗಿ ಶಿವ ಬರುವುದು, ಶಿವನಿಂದೆ ಮಾಡಿದ ಆ ಕಪಟಬ್ರಹ್ಮಚಾರಿಯ ವೇಷವನ್ನು ವಿಭೂತಿಯನ್ನೆರಚಿ ಕಳೆಯುವುದು, ಶಿವನನ್ನು ಮೆಚ್ಚಿಸಿ ಮದುವೆಯಾಗುವುದು—ಇದು ಪಾರ್ವತಿಯ ಜೀವನದ ಕಥೆ. ಮುಂದೆ ಬರುವ ಕುಮಾರಸ್ವಾಮಿಯ ಜನನವೇ ಮೊದಲಾದ ಸಂಗತಿಗಳು ಹರಿಹರನಿಗೆ ಬೇಕಿಲ್ಲ. ಅವನ ಕಥೆಗೆ ಅವು ತೀರ ಹೊರತಾದುವು. ಪಾರ್ವತಿಯ ಭಕ್ತಿಶ್ರದ್ಧೆಯ ಫಲವನ್ನು ತೋರಿಸುವುದು ಅವನ ಉದ್ದೇಶ. ಇಲ್ಲಿ ಶಿವನು ಪಾರ್ವತಿಯಷ್ಟು ಪ್ರಧಾನವಾಗಿ ಕಂಡು ಬರುವುದಿಲ್ಲ. ಆದರೂ ಅವನ ಈ ಲೀಲೆಯನ್ನು ಅವಳ ನೆಪದಿಂದ

ವರ್ಣಿಸಬೇಕೆಂಬ ಇಚ್ಛೆ ಹರಿಹರನಿಗಿದೆ. ಅದನ್ನು ಅವನು ನೆರವೇರಿಸಿಯೂ ಇದ್ದಾನೆ.

ಕಥೆ, ಬೇಗಬೇಗನೆ ಮುಂದುಮುಂದಕ್ಕೆ ನಡೆದರೆ ಅದರಲ್ಲಿ ಕುತೂಹಲ ಹೆಚ್ಚು, ಸ್ವಾರಸ್ಯ ಮಿಗಿಲು. ಆದರೆ ಹರಿಹರನು ಕಥೆಯ ಓಟಕ್ಕೆ ತಡೆಯುಂಟು ಮಾಡುವಂತಹ ವಿಷಯಗಳನ್ನು ಲಂಬಿಸಿ ಬರೆದಿದ್ದಾನೆ. ಸಮುದ್ರ, ಬೆಟ್ಟ, ಕಾಡು, ಪುರ ಮುಂತಾದ ಹದಿನೆಂಟು ವರ್ಣನೆಗಳು ಹೇರಳವಾಗಿವೆ. ಪೂರ್ವ ಕವಿಗಳ ಸಂಪ್ರದಾಯಕ್ಕೆ ಇಲ್ಲಿ ಹರಿಹರನು ಶರಣಾಗಿದ್ದಾನೆ, ಪಂಡಿತರ ಮೆಚ್ಚಿಕೆ ತನ್ನ ಕಾವ್ಯಕ್ಕೆ ಬರಲೆಂದು ಅವನ ಇಷ್ಟವಿದ್ದಂತೆ ಕಾಣುತ್ತದೆ. ಕಥೆಯ ದೃಷ್ಟಿಯಿಂದ ಈ ವರ್ಣನೆಗಳಿಗೆ ಮಿತಿಮೀರಿದ ಸ್ಥಳ ಇಲ್ಲಿ ಮೀಸಲಾಗಿದೆ.

ಈಗ 'ಗಿರಿಜಾ ಕಲ್ಯಾಣ'ದ ಕೆಲವು ಪ್ರಮುಖ ಸಂದರ್ಭಗಳನ್ನು ಇಲ್ಲಿ ಕೊಟ್ಟು ಅವುಗಳ ಸೊಗಸನ್ನು ಕುರಿತು ಒಂದೆರಡು ಮಾತುಗಳನ್ನು ಮಾತ್ರ ಹೇಳಲು ಸಾಧ್ಯ. ಮೊದಲನೆಯದು ಕಾಮದಹನದ ದೃಶ್ಯ.

ಶಿವನು ನಿರ್ವಿಕಲ್ಪ ಸಮಾಧಿಯಲ್ಲಿ ಮೈಮರೆತಿದ್ದಾನೆ. ಮನ್ಮಥನು ಬಂದು ಶಿವನು ತಪಸ್ಸು ಮಾಡುತ್ತಿದ್ದ ಮತಂಗ ಪರ್ವತವನ್ನು ಹತ್ತಿ 'ಅವನ ಎಡಗಡೆ ನಿಂತು' ದೇವತೆಗಳೆಲ್ಲ ತನ್ನನ್ನು ಹುರಿದುಂಬಿಸುತ್ತಿರಲು ಬಾಣಗಳಿಂದ ಶಿವನನ್ನು ಹೊಡೆಯಲು ಸಿದ್ಧನಾಗಿದ್ದಾನೆ.

[೧] ಹರಿಯಜರರಿದರಿದೆನಲಂ
ಬರತದೊಳ್ ಕಲಹಲಂಪಟಂ ನಾರದನಾ
ರ್ದಿರೆ ಕಾಮಂ ಸಾಯಲ್ಬಾ
ಲ್ಲರ ದೇವಂ ತೊಟ್ಟನೊಂದು ಸರಲಂ ತೊಟ್ಟಂ

---

೧ ಅರಿದು + ಎನಲ್ = ಅಸಾಧ್ಯ ಎನ್ನಲು. ಆರ್ದಿರೆ = ಗರ್ಜಿಸಿರಲು, ಕೂಗಿರಲು.

ಆ ಬಾಣ ಶಿವನನ್ನು ಸೋಕದೆ ಹಿಂದಿರುಗಿತು. ಮೋಹನ ಸಂತಾಪನ ವಶೀಕರಣಾಸ್ತ್ರಗಳನ್ನು ಪ್ರಯೋಗಿಸಿದರೂ ಶಿವನು ಅಭೇದ್ಯನಾಗಿ ಅಚಲನಾಗಿರುತ್ತಾನೆ. ಮನ್ಮಥನಿಗೆ ಮುಂದಿನ ದಾರಿ ತೋರದೆ ಏನು ಮಾಡಲೆಂದು ಯೋಚಿಸುತ್ತ ನಿಲ್ಲುತ್ತಾನೆ. ಅಷ್ಟು ಹೊತ್ತಿಗೆ ಹೂ ತರಲು ಹೋಗಿದ್ದ ಪಾರ್ವತಿ ಹಿಂದಿರುಗಿ ಬಂದು ಶಿವನ ಹತ್ತಿರ ನಿಂತು ಅವನಿಗೆ ಹೂಗಳಿಂದ ಅಲಂಕಾರ ಮಾಡುತ್ತ ಒಲವಿನ ನೋಟದಿಂದ ನೋಡುತ್ತಾಳೆ. ಅವಳು ಬಂದದ್ದು ಕಾಮನ ಉತ್ತೇಜನಕ್ಕೆ ಕಾರಣವಾಯಿತು. ಅವನು ತನ್ನ 'ಕುಸುಮ ಕೋದಂಡಮಂ ಕೊಂಡು' ಬಾಣವನ್ನು ಹೂಡಿ ಕಿವಿವರೆಗೂ ಸೆಳೆದು, ಪಾರ್ವತಿಯ ಚಿತ್ತಾಭಿಲಾಷೆಯನ್ನು ಈಡೇರಿಸುವುದಕ್ಕಾಗಿ ಶಿವನ ಕಡೆಗೆ ಗುರಿಯಿಟ್ಟು ಹೊಡೆದನು. ಆ ಬಾಣದ ಪ್ರಭಾವದಿಂದ ಶಿವನ ಸಮಾಧಿ ಸಂಚಲಿತವಾಗಿ ಬಹಿರಂಗಭಾವವು ಬಂದು ಅವನು ನೋಡುವಾಗ, ಮದನನ ಪಂಚಬಾಣ ಹರಿತಂದು ತಪಸ್ಸಿನ ಬೆಸುಗೆಯನ್ನು ಬಿಡಿಸಿ ತನ್ನ ಮನಸ್ಸನ್ನು ಮೋಹಿಸಿದ್ದು ಗೋಚರವಾಗುತ್ತದೆ. ಎದುರಿನಲ್ಲಿ ಆ ಪುಷ್ಪಶರಕ್ಕಿಂತಲೂ ನೂರುಮಡಿ ಸುಕುಮಾರಳಾದ ಪಾರ್ವತಿ ಕಂಪಿಸುತ್ತ ನಮಸ್ಕರಿಸುತ್ತಿದ್ದಾಳೆ. 'ನಾನೇಕೆ ಈ ಮಾನಿನಿಯೇಕೆ, ಈ ಬಾಣವು ಎಲ್ಲಿಯದು, ಎಲ್ಲಿಂದ ಬಂತು, ಯಾರಿಂದ ಹೀಗಾಯಿತು' ಎಂದು 'ಕಾಮನಿರ್ಪ ವಾಮಭಾಗಮಂ ನಿಟಿಲಾಕ್ಷಂ ನಸುಗೋಪದಿಂ ನೋಡಿದಾಗಳ್':

೧ಇಟ್ಟಣಿಸಿ ಘುಡುಘುಡಿಸಿ ಕಿಡಿ
ಗುಟ್ಟಿ ಕನಲ್ದಡಸಿ ಸಿಡಿಲ ಬಳಗದ ಮುಳಿಸಂ

---

೧ ಇಟ್ಟಣಿಸಿ = ಗುಂಪಾಗಿ. ಕನಲ್ದು = ಕೆರಳಿ.

ತೊಟ್ಟುದು ಬಿಸುಗಣ್ಣುರಿ ಪೊಱ
ಮುಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ ||

[೧]ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱಿದತ್ತು ಬಾ
ನ್ಗೊಗೆದುದು ನಿಂದು ಪೊಂಬೆಳಗುಮಂ ಪರಪುತ್ತದು ದಂಧಗಿಲ್ ಧಗಿ
ಲ್ಧಗಿಲೆನುತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ||

[೨]ಗಗನದ ಹರಿ ಸುರಪತಿಗಳ್
ಜಗದ್ಧಿತಾರ್ಥಂ ಮಹೇಶ ಕರುಣಿಪುದೆಂಬ
ನ್ನೆಗಮಿತ್ತಲ್ ಘುರಿಘುರಿ ಭುಗಿ
ಭುಗಿಲೆನೆ ನೆಱೆ ಕಾಮನುರಿದು ಕರಿಮುರಿವೋದಂ ||

[೩]ಅರರೆ ಭುಘುರ್ಘುಗು ಭಾಪುರೇ ಭುಗುಭುಗು ಪ್ರಜ್ವಾಲೆ ಮಜ್ಝುಯ್ಯದೇ
ವುರೆ ಕೋಪಾನಳ ವಿಸ್ಫುಲಿಂಗಮುಮುಮು ಪ್ರದ್ಯೋತಮುಯ್ಯುಯ್ಯ ಭೀ
ಕರವಾಹಾ ಛಿಣಿಛಿಳ್‌ಛಿಟಿಲ್ ಭಲರೆ ಭಾಳಾಭೀಳಮೆಂದೆಂದು ನಿ
ರ್ಜರಲೋಕಂ ಬೆಱಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿಕಂದರ್ಪನಂ ||

[೪]ಸಂದಣಿಸಿ ಪತ್ತಿದುರಿ ಘುರಿ
ಲೆಂದುರುಪಿದ ಬೇಗದಿಂದಮುರಿದಾಕ್ಷಣದೊಳ್
ಬೆಂದ ನುಲಿಯಂತೆ ಮದನಂ
ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ ||

ರುದ್ರನ ಉರಿಗಣ್ಣಿನಿಂದ ಹೊಮ್ಮಿದ ಭೀಕರ ಜ್ವಾಲಾಮಾಲೆಯನ್ನು ವರ್ಣಿಸುವ ಮೇಲಿನ ಪದ್ಯಗಳಲ್ಲಿ ಹರಿಹರನ ಕವಿತಾಶಕ್ತಿಯ ಉಗ್ರಕಾಂತಿ ಅನುಭವಕ್ಕೆ ಬರುತ್ತದೆ. ಆ ಜ್ವಾಲೆಯ ಎದುರಿಗೆ ಮನ್ಮಥನು ಸೆಕೆ ಸೋಕಿದರೆ ಸುಟ್ಟು ಕರಿಯಾಗುವ

---

೧ ಬಾನ್ಗೆ = ಆಕಾಶಕ್ಕೆ, ಅಗಿಯದೆ = ಹೆದರದೆ. ೨ ಜಗತ್ + ಹಿತಾರ್ಥಂ, ಎಂಬನ್ನೆಗಂ = ಎನ್ನುವಷ್ಟರಲ್ಲಿ; ೩ ವಿಸ್ಫುಲಿಂಗಂ = ಕಿಡಿ. ಪ್ರದ್ಯೋತ = ಹೊಳಪು, ಪ್ರಕಾಶ. ಭಾಳ + ಅಭೀಳ = ಹಣೆಯ (ಕಣ್ಣಿನ) ಭಯಂಕರತೆ. ನಿರ್ಜರ = ದೇವತೆ. ೪ ನುಲಿಯಂತೆ = ಹಗ್ಗದ ಹಾಗೆ. ಅಭವನ್ = ಶಿವನು.

ಕೀಟ. ಈ ದೃಶ್ಯದ ಭಯಂಕರತೆಯನ್ನು ಹರಿಹರನು ತಕ್ಕ ಮಾತುಗಳಲ್ಲಿ ಸೆರೆಹಿಡಿದು ಕಣ್ಣಮುಂದೆ ತೋರಿಸುತ್ತಾನೆ.

(೨) ಕಾಮನನ್ನು ಕಿಚ್ಚು ಮುಕ್ಕಿದ ಮೇಲೆ ರತಿಗೆ ಶೋಕ ಹೆಚ್ಚಾಗಿ 'ಕರಗಿ ಕೊರಗಿ ಬುದ್ಧಿ ಕೋಡಿ[೧] ಕರಣಂ ಬಾಡಿ ಮತಿ ಕೆಟ್ಟು' ಅಳುವುದು ಒಂದೇ ಗತಿ:

ಎಳೆಯನೆ ಸುಕುಮಾರನೆ ಸದ
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತ
ತ್ಫಳಮೆ ಸುಧಾರಸವೇ ನಿ
ನ್ನಳವಱಿಯದೆ ನೊಸಲ ಕಣ್ಣ ಮುಸುಕಂ ತೆಱೆದೈ ॥

[೨]ಭಾವಿಸಿ ಭವನಂ ಕುಸುಮಾ
ಸ್ತ್ರಾವಳಿಯೆಂದೆಚ್ಚು ಗೆಲ್ವೆಯೆಂದಿರ್ದನಿದಿಂ
ತೋವೋ ನಿಟಿಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆನಲರ್ವಿಲ್ಲರಸಾ

[೩]ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತುಕ್ಕಟಾ
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾಳಾಯ್ತು ಕಂದರ್ಪ ಸ
ದ್ಭಾವಂ ಭಸ್ಮಮದಾಯ್ತು ವೈಮೆ ಮಡಿಯಿತ್ತುತ್ಸಾಹಮಿಂಗಿತ್ತದಿ
ನ್ನೇವೇಳ್ವೆಂ ನಡೆವೆತ್ತ ಸಾರ್ವೆನಿಳೆಗಿನ್ನೇನಪ್ಪೆನೆಂತಿರ್ಪೆನೋ ॥

[೪]ಕೇಳಲೆ ಮನ್ಮಥ ಹಂಸೆಯ
ತೂಳದ ತಳ್ಪಂ ಕಠಂ ಕಠಿನಮೆಂದೀಗಳ್
ಭಾಳಾಕ್ಷಿಯರಮನೆಯೊಳಾ
ಭೀಳದ ದಳ್ಳುರಿಯ ಮಂಚದೊಳ್ ಪವಡಿಸಿದೈ ॥

[೫]ಬೆಳಗಾಯಿತ್ತುಪ್ಪವಡಿಸು
ತೊಳಗುವ ಮಣಿಮುಕುರಮಂ ನಿರೀಕ್ಷಿಸು ಹಂಸಾ

---

೧ ಕೋಡಿ = ಕುಗ್ಗಿ. ೨ ಇದು + ಇಂತು + ಓವೊ. ಓವೊ = ಓಹೋ! ನಿಟಿಲಾಗ್ನಿ = ಹಣೆ (ಕಣ್ಣ) ಉರಿ. ೩ ಇಳೆಗೆ + ಇನ್ + ಏನಪ್ಪೆನ್.; ೪ ತೂಳ = ಹತ್ತಿ, ಇಲ್ಲಿ ಹತ್ತಿಯ ಹಾಗಿರುವ ಗರಿ. ಕಠಂ = ಹೆಚ್ಚಾಗಿ. ಭಾಳಾಕ್ಷಿಯ + ಅರಮನೆ = ಹಣೆಗಣ್ಣೆಂಬ ಅರಮನೆ. ೫ ಉಪ್ಪವಡಿಸು = ಏಳು; ನಡಪಾಡಿಸು = ಓಡಾಡಿಸು.

ವಳಿಯಂ ನಡಪಾಡಿಸು ಕೋ
ಕಿಳನಾದಮನಾಲಿಸುಸಿರದಿರ್ಪರೆ ಮದನಾ ॥

ಎಂದುಂ ಮುಳಿದೊಡೆ ತಿಳಿವಂ
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ
ಯಂದಂ ಪೊಸತಿಂದಿನ ಮುಳಿ
ಸೆಂದಿನ ಮುಳಿಸಿನವೊಲಲ್ಲ ಮದನ ನೃಪಾಲಾ ॥

ಪನ್ನಗ ಭೂಷಣ ವಿಷ ಸಂ
ಪನ್ನನ ನಿಷ್ಠುರಗುಣಂಗಳುರಿಪುವುದುಚಿತಂ
ನಿನ್ನಂ ನಿನ್ನೀ ಸದ್ಗುಣ
ಮೆನ್ನಂ ನೆರೆದುರಿಪಲೇಕೆ ಮನ್ಮಥರಾಜಾ ॥

೧ಮೊಱೆಯೋ ಮೊಱೆಯೋ ಶಿವಧೋ
ಕಱೆಗೊರಲನ ಕಣ್ಣ ದಾಳಿ ಕುಸುಮಾಯುಧನಂ
ನೆಱೆ ಮುತ್ತಿತ್ತಯ್ಯೋ ಇದೆ
ನಱಿವವರಿಲ್ಲಕ್ಕಟಾ ಕೃಪಾಳುಗಳಿಲ್ಲಾ ॥

೨ವನದೇವತೆಯರಿರಾ ನಂ
ದನದೇವತೆಯರಿರ ದೆಸೆಯ ದೇವತೆಯರಿರಾ
ಘನ ಪಾಪಂ ಪುದಿದಿರ್ದೀ
ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ ॥

ಈ ವಿಲಾಪದಲ್ಲಿ ಕವಿ ಶೋಕವನ್ನು ತೆರೆಚಿಮ್ಮಿಸಿ ಹರಿಯಿಸಿದ್ದಾನೆ. ಅಷ್ಟು ಬೇಗನೆ ಅನಿರೀಕ್ಷಿತವಾಗಿ ಕಾಮನು ಸುಟ್ಟುಹೋದನೆಂದು ರತಿಗೆ ತಿಳಿಯಲು ಕೂಡ ಹೊತ್ತಿಲ್ಲ. ಮಿಂಚಿನ ವೇಗದಿಂದ ಮನ್ಮಥನ ದೇಹ ಕಣ್ಮರೆಯಾಯಿತು. ರತಿಗೆ ದಿಗ್ಭ್ರಮೆ ಹಿಡಿಯು ತ್ತದೆ. ತನ್ನ ಕಣ್ಣನ್ನು ತಾನೇ ನಂಬಲಾರದೆ ಹೋದಳು. ಆದದ್ದು ತಿಳಿದ ಕೂಡಲೆ ಅವಳ ದುಃಖ ಹೊಸಲಾಗಿ ಹರಿಯುತ್ತದೆ.

---

೧ ಶಿವಧೋ = ಕಷ್ಟದಲ್ಲಿದ್ದಾಗ ಶಿವನೇ ಎಂದು ಮೊರೆಯಿಡುವುದು. ಕಱೆಗೊರಲ = ಶಿವನ. ೨ ಪುದಿದಿರ್ದ = ಕವಿದಿದ್ದ.

ಕಾಮನೊಡನೆ ತಾನು ಕಳೆದ ದಿನಗಳ ಸ್ಮರಣೆ ಕೆರಳಿ ಶೋಕವನ್ನು ಮತ್ತಷ್ಟು ಹೆಚ್ಚಿಸುತ್ತದೆ. ತನ್ನ ಸರ್ವಸ್ವವೂ ಹಾಳಾದಂತೆ ಅವಳಿಗೆ ಅನಿಸುತ್ತದೆ. ಪಂಚಬಾಣದ ಸರ್ವಗುಣಗಳನ್ನು ನೆನೆ ನೆನೆದು ಸೈರಿಸಲಾರದೆ ಮತ್ತೆ ಮತ್ತೆ ಕಣ್ಣೀರು ಸುರಿಸುತ್ತಾಳೆ. ಅವಳ ಶೋಕದಲ್ಲಿ ನಮ್ಮ ಹೃದಯ ಒಂದಾಗಿ ನಮಗೂ ಪ್ರೀತಿಯ ಪದಾರ್ಥ ಕಳೆದುಹೋದಂತೆ ಕಾಣುವುದು. ಈ ದೃಶ್ಯ ಕರುಣೆಯ ಒಸರಿನಿಂದ ರಸಮಯವಾಗಿದೆ.

ರತಿ ಅಳುತ್ತ ತನ್ನ ಸಂಕಟವನ್ನು ತಾಳಿಕೊಳ್ಳದೆ ಚಿತಾರೋಹಣ ಮಾಡಿ ಕಾಮನಂತೆ ತಾನೂ ಆಗಬೇಕೆಂದು ಇಷ್ಟಪಟ್ಟು ಅಲ್ಲಿಗೆ ಬಂದ ಮನ್ಮಥನ ಗೆಳೆಯ ವಸಂತನನ್ನು ಕೇಳಿದಂತೆಯೂ, ಅವನು ಸಮಾಧಾನ ಮಾಡಿದರೂ ನಿಲ್ಲದೆ ಅವಳು ಚಿತೆಯನ್ನು ಹತ್ತಲು ಹೋದಾಗ ಆಕಾಶವಾಣಿಯೊಂದು ಅವಳಿಗೆ ಅಭಯಪ್ರದಾನ ಮಾಡಿದಂತೆಯೂ ಕಾಳಿದಾಸನು ಮಾಡಿರುವ ವರ್ಣನೆ. ಹರಿಹರನು ಇವನ್ನೆಲ್ಲ ಬಿಟ್ಟಿದ್ದಾನೆ. ವಸಂತನ ಬರವಾಗಲಿ ಆಕಾಶವಾಣಿಯ ಆವಶ್ಯಕತೆಯಾಗಲಿ ಅವನಿಗೆ ಸರಿತೋರಲಿಲ್ಲ. ಹತ್ತಿರದಲ್ಲೇ ಇರುವ ಪಾರ್ವತಿಯಿಂದ ರತಿಯನ್ನು ಅವನು ಸಮಾಧಾನ ಮಾಡಿದ್ದಾನೆ. ಸ್ಕಾಂದಪುರಾಣದ ಕಾಮದಹನದ ವೃತ್ತಾಂತದಿಂದ ಈ ಮಾರ್ಪಾಡು ಅವನಿಗೆ ಬಂದಿರಬಹುದು. ಕಲೆಯ ದೃಷ್ಟಿಯಿಂದ ಇದು ಸುಂದರವಾಗಿದೆ. ತನ್ನ ಹಾಗೆಯೇ ಸಂಕಷ್ಟಕ್ಕೆ ಒಳಗಾದ ರತಿಗೆ ಪಾರ್ವತಿ ಸಹಾಯಮಾಡುವುದು ಸಹಜವಾದದ್ದು.

(೩) ಕಾಮನನ್ನು ಸುಟ್ಟಮೇಲೆ ಶಿವನು ಮುಂದೆ ನಿಂತಿದ್ದ ಗಿರಿಜೆಯನ್ನು ನೋಡದೆ ನುಡಿಸದೆ ಸೋಂಕದೆ ನಿಶ್ಚಿಂತನಾಗಿ ಅಂತರ್ಧಾನನಾದದ್ದು ಪಾರ್ವತಿಯ ಮುಳಿಸಿಗೆ ಕಾರಣವಾಯಿತು.

೧ಆನಿಂತಿಂತರ್ಚಿಸುತ್ತಂ ಗತಿಮತಿಪತಿಯೆನ್ನಾಯುವೆನ್ನಾತ್ಮತತ್ವಂ
ತಾನೆಂದುತ್ಸಾಹದಿಂದಿರ್ದಚಳ ಪತಿಯ ಮೇನಾಖ್ಯೆಯೊಂದಳ್ಕಱಿಂ ಬಿ
ಟ್ಟಾನಂದಂಗೂಡಿ ಕಾರುಣ್ಯಮನನವರತಂ ಹಾರುತಿರ್ದಲ್ಲಿ ಕೇಳಿಂ
ತೇನೆಂದುಂ ನೋಡದುಗ್ರಂ ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ ॥

ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ನುಡಿಯಿಸದಂತ
೨ರ್ಧಾನಕ್ಕೆ ಸಂದನದಱಿಂ
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ ॥

ಎಂದು ಸಖಿಯರೊಡನೆ ಹೇಳುತ್ತ 'ಚಲದ ಲಲನೆ, ಬಲ್ಪಿನ ಭಾವಕಿ, ಏಕನಿಷ್ಠಾನಿಧಿ'ಯಾದ ಪಾರ್ವತಿ ಬಿಸಿಲು ಮಳೆ ಶೀತಗಳಲ್ಲಿ, ಬೆಟ್ಟ ಕಾಡು ಸರೋವರಗಳಲ್ಲಿ, ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಲು ತೊಡಗುತ್ತಾಳೆ. ಅವಳ ತಪಸ್ಸು 'ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆ'ಯಲು ಅವನಿಗೆ ಕರುಣೆ ಹುಟ್ಟಿ 'ನಾರಸೀರೆಯ ಧೀರೆ'ಯಾದ ಗಿರಿಜೆಯ ಮನಸ್ಸನ್ನು ಒರೆದು ನೋಡುವೆನೆಂದು ವಟುವೇಷವನ್ನು ತಾಳಿ ಹೈಮವತಿಯ ತಪೋವನಕ್ಕೆ ಬಂದನು. ಅವನನ್ನು ಅತಿಥಿಯಂತೆ ಭಾವಿಸಿ ಪಾರ್ವತಿಯ ಸಖಿಯರು ಸತ್ಕರಿಸುತ್ತಾರೆ; ಅವನು ಸುಮ್ಮನಿರದೆ "ಈ ಹೆಂಗಸು ಯಾರು? ಏತಕ್ಕಾಗಿ ಇವಳ ತಪಸ್ಸು? ಆವ ಪುಣ್ಯಶಾಲಿಗಾಗಿ?" ಎಂದು ವಿಚಾರಿಸುತ್ತಾನೆ. "ನಿಮಗೇಕೆ ಈ ವಿಚಾರ, ಹಸಿವನ್ನೂ ಆಯಾಸವನ್ನೂ ನೀಗಿಹೋಗುವುದು ಬಿಟ್ಟು ಈ ಸುದ್ದಿಯೆಲ್ಲ ಏತಕ್ಕೆ?" ಎಂದು ಸಖಿಯರು ಹೇಳಲು ಅದಕ್ಕೆ ನಸುನಗುತ್ತ, ಆ ವಿಪ್ರನು:

---

೧ ಅಚಳಪತಿಯ = ಬೆಟ್ಟಗಳಿಗೆ ಒಡೆಯನ ಎಂದರೆ (ಪಾರ್ವತಿಯ ತಂದೆಯಾದ) ಹಿಮವಂತನ. ಮೇನಾಖ್ಯೆಯ = (ಪಾರ್ವತಿಯ ತಾಯಿಯಾದ) ಮೇನೆ ಎಂಬ ಹೆಸರುಳ್ಳವಳ. ಅಳ್ಕಱಿಂ = ಅಕ್ಕರೆಯನ್ನು, ಹಾರು = ಎದುರು ನೋಡು, ನಿರೀಕ್ಷಿಸು. ೨ ಸಮಂತು = ಚೆನ್ನಾಗಿ.

[೧]ಬೆಸಗೊಂಡೊಡೆ ದೋಷಮೆಯಿಾ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ
ರಿಸಬರ್ಪುದೆ ತಪಮಂ ಮಾ
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ ॥

ಎಂದನು. ಈ ಮಾತನ್ನು ಹತ್ತಿರಿದ್ದ ಪಾರ್ವತಿ ಕೇಳಿ ಮುನಿಯುತ್ತ ಜಪವನ್ನು ಬಿಟ್ಟು ಕಪಟವಟುವನ್ನು ಕಣ್ದೆರೆದು ನೋಡಿದಾಗ ಅವಳಲ್ಲಿ ಯಾವುದೋ ಹರ್ಷ ಸಂಚರಿಸಲಾರಂಭಿಸಿತು. ಅವಳ ಮಧುರ ದೃಷ್ಟಿಗಳನ್ನು ಕಂಡ ವಿಪ್ರನು ಕರಗಿ ಪುಳಕವನ್ನು ಹೊಂದಿ, ಉದ್ರೇಕದಿಂದ ಕಳಚಿ ಬೀಳುತ್ತಿದ್ದ ವೇಷವನ್ನು ಹಿಡಿದು ನಿಲ್ಲಿಸಿ, ಅತಿ ಧೈರ್ಯದಿಂದ ಗಿರಿಜೆಯೊಡನೆ ಮಾತಾಡಲು ಮೊದಲು ಮಾಡಿದನು. :

ಎಳಗೆಂಪನುಗುಳ್ವ ಮೃದುಕೋ
ಮಳ ಪದಕಮಳಂಗಳೀಗಳತಿ ಕಠಿನಮೆನಿ
ಪ್ಪಿಳೆಯೊಳ್ ಹರಹರ! ಕಲ್ನೆಲ
ಕಳವಟ್ಟುವಿವೆಂತು ಬಾಲಹಂಸೀಯಾನೇ ॥

[೨]ಮಿಸುಗುವ ಶಶಿವದನಂ ಕಡು
ಬಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಾ
ಜಿಸುವ ಕಚಭಾರಮಯ್ಯೋ
ಪೊಸ ಜಡೆಯಂ ಪಡೆದುದಕಟ ಘನಯೌವನದೊಳ್ ॥

[೩]ವನಜಾನನೆಯೇಱುಂಜ
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ ದೋಷವೇ ಮೃಗನಯನೇ ॥

---

೧ ತಪೋನಿರೋಧ = ತಪಸ್ಸಿನ ಆಯಾಸ, ಸಂಕಟ. ಮಾಣಿಸು = ನಿಲ್ಲಿಸು. ೨ ಮಿಸುಗುವ = ಹೊಳೆಯುವ. ೩ ಏಱುಂಜವ್ವನ = ಏರುವ ಯೌವನ ಎಂದರೆ ಇನ್ನೂ ಬೆಳೆಯುತ್ತಿರುವ ಪ್ರಾಯ.

ಎಂದು 'ಪ್ರೇಮಜನ ಪ್ರಣಯ ಕಲಹ ಲೀಲಾಲೋಲ ಚಿತ್ತ' ನಾದ ಶಿವನ 'ಮೃದುಕಠಿನಾಕ್ಷೇಪಗರ್ಭಿತ'ವಾದ ಮಾತು. ಪಾರ್ವತಿಗೆ ಏನೂ ಹೇಳಲು ತೋರದು; ಹೇಳುವಂತಿಲ್ಲ ಹೇಳದಿರುವಂತಿಲ್ಲ. ಆದರೂ ಮೆಲ್ಲನೆ ನುಡಿದಳು:

[೧]ಬಗೆವರ್ಚಿ ಕೇಳುತಿರ್ದಪೆ
ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ
ಭುಗೆ ಕಾರುಣ್ಯಾಬ್ಧಿಗೆ ಶೂ
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ

ಇದಕ್ಕೆ 'ದುಷ್ಟಧರಾಮರನಟ್ಟಹಾಸದಿಂದ':

ಅಕ್ಕಕ್ಕೆ ಕಾಮಹರನೊಳ್
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಮಂ
ಮಿಕ್ಕವನೊಳ್ ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ ||

[೨]ನೀನಿನಿಯಳ್ ವಿಷಮಾತಂ
ನೀನತಿಮೃದು ಕಠಿನಗುಣಗಣಾಶ್ರಯನಾತಂ
ನೀನಬಲೆಯುಗ್ರನಾತಂ
ನೀನುರುತರಭೀರು ಸರ್ಪಭೂಷಣನಾತಂ ||

ಎಂದು ನುಡಿದ 'ಶಿವನಿಂದೆಗೆ ಭವಾನಿ ಮುಳಿದು ಕನಲ್ದು', ಘೋರತಪದಲ್ಲಿ ಕೋಪಿಸಬಾರದು, ತಾಂ ತಪದ ಕೇಡು, ಪತಿನಿಂದೆಯುಮಂ ಸೈರಿಸಬಾರದೆನುತೆ:

ಆದ ನಿರೋಧದ ನಿಂದೆಯ
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ತಾಂ

---

೧ ಬಗೆವರ್ಚಿ = ಮನಸ್ಸು ಉಬ್ಬಿ. ಮಿಗೆ = ಹೆಚ್ಚಾಗಿ (ಚೆನ್ನಾಗಿ).
೨ ಇನಿಯಳ್ = ಮಧುರವಾದ ರೂಪವುಳ್ಳವಳು.

ಪೋದುದು ವಟುವೇಷಂ ಶಿವ
ನಾದೋಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ॥

ಪಾರ್ವತಿ ಎಸೆದ ವಿಭೂತಿ ಶಿವನೊಡನೆ ಮುಂದೆ ಆಗಲಿರುವ ತನ್ನ ಮದುವೆಯಲ್ಲಿ ಜೀರಿಗೆ ಬೆಲ್ಲವನ್ನು ಸುರಿದಂತೆ ಆಯಿತು.

ಇಲ್ಲಿ ಹರಿಹರನು ಮುಖ್ಯವಾಗಿ ಮಾಡಿಕೊಂಡಿರುವ ಮಾರ್ಪಾಡು ಯಾವುದೆಂದರೆ, ಪಾರ್ವತಿ ಶಿವನನ್ನು ವಿಭೂತಿಯಿಂದ ಹೊಡೆಯುವುದು. ಇದು ಬೇರೆಲ್ಲಿಯೂ ಕಂಡುಬರುವುದಿಲ್ಲ. ಕಾಳಿದಾಸನ ಪಾರ್ವತಿ ತನ್ನ ಸುಕುಮಾರಸ್ವಭಾವಕ್ಕೆ ತಕ್ಕಂತೆ ಹರನಿಂದೆಯನ್ನು ಕೇಳಲಾರದೆ ಸ್ಥಳಬಿಟ್ಟು ಎದ್ದು ಹೋಗುತ್ತಾಳೆ. ಹರಿಹರನ ಪಾರ್ವತಿಯಾದರೋ ಧೀರೆ, ಛಲವನ್ನುಳ್ಳವಳು. ಆದ್ದರಿಂದ ಅವಳು ಶಿವನನ್ನು ವಿಭೂತಿಯಿಂದ ಹೊಡೆಯುವುದು ಹರಿಹರನಿಗೆ ಸಹಜವಾಗಿಯೇ ಕಂಡಿರಬೇಕು. ಪಾರ್ವತಿಯ ನಿಷ್ಠೆ ಛಲಗಳು ಇಲ್ಲಿ ಫಲಿಸಿವೆ. ಅಲ್ಲದೆ ಭಸಿತದ ಮಹಿಮೆಯನ್ನೂ ಹೇಳಿದ ಹಾಗಾಗುತ್ತದೆಂದು ಕವಿಯ ಭಾವನೆ ಇರಬಹುದು. ಶಿವನ ಲೀಲಾವಿನೋದವು ಚೆನ್ನಾಗಿ ರೂಪುಗೊಂಡಿದ್ದರೂ ಸ್ವಲ್ಪ ನಯಗೆಲಸ ಹೆಚ್ಚಾಗಿದ್ದರೆ ಈ ನಿರೂಪಣೆ ಇನ್ನೂ ಸೊಗಸಾಗಬಹುದಿತ್ತು.

(೪) 'ಗಿರಿಜಾ ಕಲ್ಯಾಣ'ದಲ್ಲಿ ಪ್ರಾಸಂಗಿಕವಾಗಿ ಒಂದೆರಡು ಸಂದರ್ಭಗಳು ಬರುತ್ತವೆ. ತಾರಕಾಸುರನೊಡನೆ ಯುದ್ಧಮಾಡಿ ಸೋತು ಕಂಗೆಟ್ಟ ದೇವತೆಗಳು ಒಪ್ಪಂದ ಮಾಡಿಕೊಂಡು ಬರುವಂತೆ ಬೃಹಸ್ಪತಿಯನ್ನು ರಾಯಭಾರಿಯನ್ನಾಗಿ ಕಳುಹಿಸುವುದು, ಬೃಹಸ್ಪತಿ ಹೋಗಿ ಸಂಧಾನಪ್ರಯತ್ನ ವಿಫಲವಾಗಿ ಹಿಂತಿರುಗುವುದು, ಮನ್ಮಥನನ್ನು ಕರೆತರುವುದಕ್ಕೆ ಬೃಹಸ್ಪತಿ ಪ್ರಯಾಣ ಮಾಡುವುದು, ಶಿವನಿಗೆ ಪಾರ್ವತಿಯಲ್ಲಿ ಆಸಕ್ತಿ ಉಂಟಾಗುವಂತೆ

ಮಾಡಬೇಕೆಂದು ಮನ್ಮಥನನ್ನು ದೇವತೆಗಳು ಪ್ರಾರ್ಥಿಸುವುದು—ಈ ಸಂದರ್ಭಗಳನ್ನು ಹರಿಹರನು ಹೊಸದಾಗಿ ಸೇರಿಸಿದ್ದಾನೆ. ಬೃಹಸ್ಪತಿಯ ಪಾತ್ರಕ್ಕೆ ಕವಿ ಬಹಳ ಅನ್ಯಾಯ ಮಾಡಿದ್ದಾನೆ. ಆ ಪಾತ್ರದ ತಿಳಿಗೇಡಿತನವನ್ನು ಕಂಡು ಅಳಬೇಕೋ ನಗಬೇಕೋ ಗೊತ್ತಾಗುವುದಿಲ್ಲ. ಹರಿಹರನ ಬೃಹಸ್ಪತಿಯಲ್ಲಿ ನಿಜವಾಗಿಯೂ ಬುದ್ಧಿ ಕಡಿಮೆ. ಇಂಥ ಒಂದು ಸಂದರ್ಭವನ್ನು ಹೇಳಬೇಕೆಂದು ಕವಿಗೆ ತೋರಿದ್ದು ಅವನ ಪ್ರತಿಭೆಗೆ ಸಾಕ್ಷಿ; ಆದರೆ ಅದನ್ನು ನಿರೂಪಿಸಿರುವ ರೀತಿಯಲ್ಲಿ ಅವನು ಜಯಶಾಲಿಯಾಗಿಲ್ಲ. ಮೇಲೆ ಹೇಳಿದ ಸಂದರ್ಭಗಳಲ್ಲಿ, ಇಲ್ಲಿ ಒಂದನ್ನು ಮಾತ್ರ ವಿಶದವಾಗಿ ತೋರಿಸಬಹುದು.

ಶಿವನ ತಪೋಭಂಗವನ್ನು ಮಾಡುವಂತೆ ಕಾಮನನ್ನು ಒಪ್ಪಿಸುವ ಕೆಲಸ ಬೇರೆ ಗ್ರಂಥಗಳ ಪ್ರಕಾರ ಇಂದ್ರನಿಗೆ ಸೇರಿದ್ದು. ಹರಿಹರನಾದರೆ ಗೋವಿಂದನನ್ನೇ ಈ ಕೆಲಸಕ್ಕೆ ಗಂಟುಹಾಕಿದ್ದಾನೆ. ಈ ತಂದೆಮಕ್ಕಳ ಮಾತು ವಿಚಿತ್ರವಾಗಿದೆ.

ಗೋವಿಂದ—ದರ್ಪಕ ಕೇಳು. ತಾರಕನ ಹಾವಳಿಯಿಂದ ಲೋಕವೆಲ್ಲಾ ಗೋಳಾಡುತ್ತಿದೆ. ನಮ್ಮ ಪ್ರತಾಪವೇನೂ ಅವನ ಮುಂದೆ ನಡೆಯುವುದಿಲ್ಲ. ಶಿವನಿಗೆ ಮಗನಾಗಿ ಹುಟ್ಟುವ ಕುಮಾರಸ್ವಾಮಿಯಿಂದಲ್ಲದೆ ಅವನು ಯಾರಿಂದಲೂ ಸಾಯನು. ನೀನು ಮಾಡಬೇಕಾದ ಕೆಲಸ ಸ್ವಲ್ಪ ಇದೆ. ಶಿವನ ತಪಸ್ಸನ್ನು ಭಂಗಿಸಿ ಪಾರ್ವತಿಯೊಡನೆ ಅವನು ಸೇರುವಂತೆ ಮಾಡಬೇಕು. ಈ ಕೆಲಸ ನಿನಗೇ ಗೊತ್ತು, ನೀನೇ ಸಮರ್ಥ.

ಮದನ—ಹೌದು, ಹೌದು; ಆಗಲಿ ಆಗಲಿ, ಸರ್ವೇಶನಾದ ಶಿವನ ತಪಸ್ಸನ್ನು ಉಡುಗಿಸೆಂದು ಹೇಳುವುದು ನಿಮಗೇನು ಕಷ್ಟ?

ನಿಮ್ಮ ಮಾತು ನನಗೆ ಅಹಿತವಾಗಿದೆ. ಹೆರವರ ಮಕ್ಕಳನ್ನು ತಳ್ಳಿ ಬಾವಿಯ ಆಳ ನೋಡುವ ವಿದ್ಯೆಯನ್ನು ನನ್ನಲ್ಲಿ ತೋರಿಸಬಹುದೇ? ತಂದೆ, ಸಿಂಹದ ಬಳಿಗೆ ಆನೆಯನ್ನು ಕಳಿಸುವಂತಾಯಿತು ನಿಮ್ಮ ಮಾತು.

ಸಂಭಾಷಣೆ ಮುಗಿಯಿತು. ಅನಂತರ ವಿಷ್ಣು ಅವನನ್ನು ಹೊಗಳಿ "ನಿನ್ನಿಂದ ಸಕಲ ಲೋಕಕ್ಕೂ ಸುಖವುಂಟಾಗುವ ಈ ಸಮಯದಲ್ಲಿ ಹಿಂದೆ ಮುಂದೆ ನೋಡುತ್ತಾರೆಯೇ" ಎಂದು ಉಬ್ಬಿಸಲು "ನಾನೆಷ್ಟರವನು, ಪ್ರಾಣ ದೊಡ್ಡದೇ, ತೆಗೆ, ಇವತ್ತೇ ನನಗೆ ನೂರು ತುಂಬಿತು" ಎಂದು ಮದನ ಒಪ್ಪಿಕೊಂಡನು.

ಈ ದೃಶ್ಯ ಹರಿಹರನ ಸ್ವಂತ ಸೃಷ್ಟಿ. ಶಿವಪುರಾಣದಲ್ಲಿಯೂ 'ಕುಮಾರಸಂಭವ'ದಲ್ಲಿಯೂ ಕಾಮನೊಡನೆ ಇಂದ್ರನೇ ಮಾತಾಡಿ ಉಪಾಯದಿಂದ ತನ್ನ ಕೆಲಸವನ್ನು ಅವನಿಂದ ಮಾಡಿಸಿಕೊಂಡಂತೆ ಹೇಳಿದೆ. ತನ್ನ ಮನಸ್ಸಿನಲ್ಲಿರುವುದನ್ನು ಪ್ರಕಟವಾಗಿ ಹೇಳದೆಯೇ, ಕಾಮನು ತಾನೇ ಒಪ್ಪುವಂತೆ ಅಲ್ಲಿ ಇಂದ್ರನ ಮಾತುಗಾರಿಕೆ ಇದೆ. ಇದು ಹೆಚ್ಚು ಸಹಜ. ಹರಿಹರನಲ್ಲಿ ಯಾವ ನಯವೂ ಇಲ್ಲಿ ಕಂಡುಬರದೆ ಅವನ ನಿರೂಪಣೆ ನಗೆಗೆ ಈಡಾಗಿದೆ. ತಂದೆ ಮಕ್ಕಳ ಮಾತಿನಲ್ಲಿ ಒರಟುತನ ಇದೆ. ಕಾಮನು ತಾನೇ ವಿಷ್ಣುವಿನ ಮಗನಾಗಿ "ಹೆರವರ ಮಕ್ಕಳನ್ನು ತಳ್ಳಿ ಬಾವಿಯ ಆಳ ನೋಡಿದರಂತೆ" ಎಂದು ತಂದೆಗೇ ಹೇಳುವುದರಲ್ಲಿ ಔಚಿತ್ಯವಿಲ್ಲ. ಮಗನೆಂದು ತಂದೆಗೆ ಪ್ರೀತಿಯಿಲ್ಲ; ತಂದೆಯೆಂದು ಮಗನಿಗೆ ಗೌರವವಿಲ್ಲ.

ಮೇಲೆ ಕೊಟ್ಟಿರುವ ಪದ್ಯಗಳಿಂದಲೇ 'ಗಿರಿಜಾ ಕಲ್ಯಾಣ' ದಲ್ಲಿ ಬರುವ ವ್ಯಕ್ತಿಗಳಲ್ಲಿ ಕೆಲವರ ಗುಣಸ್ವಭಾವಗಳು ತಿಳಿದು ಬರುತ್ತವೆ. ಮುಖ್ಯವಾದದ್ದು ಪಾರ್ವತಿಯ ಪಾತ್ರ. ಹುಟ್ಟು

ವಾಗಲೇ ಅವಳು ಶಿವಭಕ್ತಿ ಸಂಪನ್ನೆ. ಚಿಕ್ಕತನದಲ್ಲಿ ಆಡಿದ ಆಟ ಶಿವಸೇವೆ. ಶಿವನನ್ನಲ್ಲದೆ ಬೇರೆ ಯಾರನ್ನೂ ವರಿಸದವಳು ಅವಳು. ನಂದೀಶ್ವರನ ಹೆದರಿಕೆಯಿಂದ ಮನ್ಮಥನು ಶಿವನ ತಪೋವನಕ್ಕೆ ಹೋಗದೆ ಹಿಂದುಳಿದಿದ್ದಾಗ ತನ್ನ ವಿಮಾನದ ನೆರಳಿನಲ್ಲಿ ಅವನನ್ನು ಕರೆದುಕೊಂಡು ಹೋಗುತ್ತಾಳೆ ಪಾರ್ವತಿ. ಅವನಿಂದ ತನ್ನ ಅಭೀಷ್ಟ ಸಿದ್ಧಿಸದೆ ಅವನು ಸುಟ್ಟುಹೋದಾಗ ರತಿಯ ಯೋಗ ಕ್ಷೇಮಚಿಂತನೆ ಪಾರ್ವತಿಯದು. ತಂದೆ ತಾಯಿಗಳಿಂದ ಅಗಲಿ ದೇಹ ದಂಡಿಸಿ ಯಾರನ್ನು ಕುರಿತು ತಪಸ್ಸು ಮಾಡಿದಳೋ ಅವನು ಕಂಡೂಕಾಣದಂತೆ ಮುಖತಿರುಗಿಸಿಕೊಂಡು ಹೋದದ್ದು ಅವಳಿಗೆ ಸಹಿಸದು. ಅವಳಲ್ಲಿ ಒಂದು ರೀತಿಯ ಕ್ರೋಧ ಸಂಜನಿತವಾಗಿ ಛಲ ಹುಟ್ಟುತ್ತದೆ. ಆದ್ದರಿಂದಲೇ ಕೊನೆಗೆ ಅವಳು ಶಿವನನ್ನು ಒಲಿಸಿಕೊಂಡಿದ್ದು. ಪಾರ್ವತಿಯ ಈ ಸ್ವಭಾವವನ್ನು ಹರಿದೇವನು ಚೆನ್ನಾಗಿ ತಿಳಿದಿದ್ದಾನೆ.

ವರ್ಣನೆಗಳ ವಿಷಯವಾಗಿ ಒಂದು ಮಾತು ಹೇಳಿ ಈ ಕಾವ್ಯವನ್ನು ಬಿಡಬಹುದು. ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳನ್ನೂ ಮನಸ್ಸಿನ ಭಾವೋದ್ರೇಕಗಳನ್ನೂ ಬಣ್ಣಿಸುವುದರಲ್ಲಿ ಹರಿಹರ ಚತುರ.

(೧) ಮಾಗಿ ಬಂದರೆ ಕಂಬಳಿ ಹೊದೆದು ಬೆಚ್ಚಗೆ ಮಲಗುವುದನ್ನು ಲೋಕ ಬಲ್ಲುದು. ನಡುಕಹತ್ತಿ, ಮೈ ಸೆಡೆತು, ಹಲ್ಲು ಉಜ್ಜಿ ವಾದ್ಯ ಬಾರಿಸಿದರೂ ಲೆಕ್ಕಿಸದೆ ಹೊರಗೆ ಬಂದು "ಎಂಥ ಚಳಿ, ಅಂದರೆ!" ಎಂದು ಅಚ್ಚರಿಪಡುವುದನ್ನೂ ಮೆಚ್ಚುವುದನ್ನೂ ಹರಿಹರನಂಥ ಕೆಲವರು ಮಾತ್ರ ಬಲ್ಲರು. 'ನುಡಿಯೆ ಹು ಹು ಎಂಬುದೇ ಕಡೆಯ ಮಾತು. ಒಡಲೇ ಪ್ರಾಣಕ್ಕೆ ಚಳಿಯ ಕುಪ್ಪಸವಾಯ್ತು'. ಏನು ಸೋಜಿಗ!

[೧]ಪುಟ್ಟಿತು ಚಳಿ ಬಳೆದುದು ಚಳಿ
ಕೊಟ್ಟಿದು ಚಳಿ ಕೊಂಡುದೆಲ್ಲಮುಂ ಚಳಿ ಚಳಿಯೆಂ
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟತೆಲ್ಲ ಚಳಿ ಪೊಸಚಳಿಯೊಳ್ ॥

(೨) ತಪಸ್ವಿಯಾದ ಶಿವನ ಎದುರಿಗೆ ನಿಂತು ಅವನ ಸಂಗವನ್ನು ಬಯಸಿ ಪಾರ್ವತಿ ನೋಡುವಾಗ :

[೨]ಪೊಸ ಜಡೆಯೊಳ್ ತೊಡಂಕಿ ನೊಸಲೊಳ್ ನಡಪಾಡಿ ಕಪೋಲ ಭಾಗದೊಳ್
ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್
ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್ ॥

ಹೀಗೆ ಆವಳ ನೋಟ ಶಿವನ ಸರ್ವಾಂಗವನ್ನು ತಬ್ಬಿ ಹಬ್ಬಲು :

[೩]ಬೆಮರ್ವಳ್ ಬೆರ್ಚುವಳುರ್ಬುವ
ಳಮರ್ವಳ್ ಪೆಜಿಸಾರ್ವಳಂಜಿ ನಿಲ್ವಳ್ ಸೋಂಕಲ್
ನಿಮಿರ್ವಳ್ ನೆನೆವಳ್ ಮುನಿವಳ್
ಸಮಸಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್

ಆ ತಪಸ್ವಿ ರುದ್ರನೂ ಹೌದು, ಶಂಕರನೂ ಹೌದು. ಅವನ ಮೇಲೆ ಹರಿದಾಡಿದ ಪಾರ್ವತಿಯ ನೋಟಕ್ಕೆ ಜಡೆ ಉರಿಗಣ್ಣು ಸರ್ಪವಿಷಗಳ ದರ್ಶನದಿಂದ ವಿರಕ್ತಿಯೂ ಭಯವೂ ಉಂಟಾಗುವುವು; ಕೆನ್ನೆಯಲ್ಲಿ ಸುಳಿದಾಡಿದಾಗ, ವಕ್ಷದಲ್ಲಿ ಮುಳುಗಿದಾಗ, ಹಸ್ತದಲ್ಲಿ ನ್ಯಸ್ತವಾದಾಗ ಆಸಕ್ತಿಯೂ ಪ್ರೀತಿಯೂ ಹುಟ್ಟುವುವು.

---

೧ ಪುಟ್ಟಿತು = ಹುಟ್ಟಿದ್ದು. ಮೆಟ್ಟಿತು = ತುಳಿದದ್ದು, ಮುಟ್ಟಿತು = ಮುಟ್ಟಿದ್ದು, ೨ ನಡಪಾಡಿ = ಓಡಾಡಿ, ಅಮರ್ಚಿ = ಸೇರಿಸಿ, ಆಸ್ಯ = ಮುಖ, ಆಳ್ದು = ಮುಳುಗಿ, ಮಾನಿಯ = ಮಾನವನ್ನು ಉಳ್ಳವಳ, ೩ ಪೆಜಿಸಾರ್ವಳ್ = ಹಿಂದಕ್ಕೆ ಸರಿಯುವಳು, ನಿಮಿರ್ವಳ್ = ನೆಟ್ಟಗಾಗುವಳು, ಕಾಯ್ವಳ್ = ಕೋಪಿಸುವಳು.

ಮುಂದಕ್ಕೆ ಅವನನ್ನು ಮುಟ್ಟುವ ಪ್ರಯತ್ನ ; ಏನಾಗುವುದೋ ಎಂಬ ಹೆದರಿಕೆಯು ತಡೆ ; ಕೋಪ, ನಿಡುಸುಯ್ಲು, ನಿರಾಸೆ. ಅವನ ಸ್ವಭಾವ ಅಚಿಂತ್ಯವಾದದ್ದು. ಆತ್ಮಾರ್ಪಣೆ ಮಾಡಿ ಶರಣಾದ ಹೊರತು ಬೇರಾವ ದಾರಿಯೂ ಇಲ್ಲ. ಆದ್ದರಿಂದ ಪಾರ್ವತಿಯ ದೈನ್ಯದೃಷ್ಟಿ ಅವನ ಪಾದಗಳ ಮೇಲೆ ಬಿತ್ತು ; ಅಲ್ಲಿಯೇ ನಿಂತಿತು.

ಕವಿಯ ಕಣ್ಣು ಎಷ್ಟು ಆಳವಾಗಿ ಹೋಗಬಲ್ಲುದೆಂದು ಮೇಲಿನ ವರ್ಣನೆಯಿಂದ ವೇದ್ಯವಾಗದೆ ಇರಲಾರದು. ಅದರ ಸಾಮರ್ಥ್ಯ ಅಸಾಧಾರಣವಾದದ್ದು. ಗಿರಿಜೆಯನ್ನು ವಿರೂಪಾಕ್ಷನಿಗೆ ಒಪ್ಪಿಸಿದ ಆ ಕಣ್ಣು ತನ್ನನ್ನೇ ಅವನಿಗೆ ಸಮರ್ಪಿಸಿಕೊಂಡ ರೀತಿಯನ್ನು ಮುಂದೆ ಶತಕಗಳಲ್ಲಿ ಕಾಣಬಹುದು.

೩. ಶತಕಗಳು

ಶತಕಗಳನ್ನು ಬರೆದ ವೀರಶೈವ ಕನ್ನಡ ಕವಿಗಳಲ್ಲಿ ಈಗ ತಿಳಿದಿರುವ ಮಟ್ಟಿಗೆ ಹರಿಹರ ಮೊದಲನೆಯವನು. ಅವನ ಶತಕಗಳ ಯೋಗ್ಯತೆಗೂ ಪ್ರಥಮಸ್ಥಾನವಿದೆ. ಅವು ತುದಿನಾಲಗೆಯಿಂದ ಬಂದುವಲ್ಲ, ಅವನ ಅಂತರಾತ್ಮದ ವಾಣಿ. ಸಂಸಾರದಲ್ಲಿ ನೊಂದು ಬೆಂದ ಅವನ ಜೀವ ವಿರೂಪಾಕ್ಷನ ಅಡಿಗಳಲ್ಲಿ ತಂಪಾಗಿ ಬದುಕಿದ್ದು ಅವುಗಳಲ್ಲಿ ಪ್ರತಿಪಾದಿತವಾಗಿರುವ ವಿಷಯ.

(೧) ಪಂಪಾಶತಕ

ಇದನ್ನು ಯಾವಾಗ ಕವಿ ರಚಿಸಿದನು ಎಂಬುದಕ್ಕೆ ಒಂದು ಕಥೆ ಪ್ರಚಾರದಲ್ಲಿದೆ. ಹರಿಹರ ಬೇಲೂರಿನಿಂದ ಹಂಪೆಗೆ ಬಂದು ವಿರೂಪಾಕ್ಷನ ದೇವಾಲಯಕ್ಕೆ ಪಶ್ಚಿಮದಲ್ಲಿದ್ದ ಸೋಮನಾಥನ ದೇಗುಲದಲ್ಲಿ ರಾತ್ರಿಯನ್ನು ಕಳೆಯುತ್ತಾನೆ. ಅದೇ ರಾತ್ರಿ ಹಂಪೆಯ ರಾಜನಿಗೂ ಅಧಿಕಾರಿಗಳಿಗೂ ಶಂಕರನು ಸ್ವಪ್ನದಲ್ಲಿ ಮೈದೋರಿ ಭಕ್ತಹರಿಹರ ಅಲ್ಲಿಗೆ ಬಂದಿರುವನೆಂದೂ ಮರ್ಯಾದೆಯೊಡನೆ ಅವನನ್ನು ಬರಮಾಡಿಕೊಳ್ಳಬೇಕೆಂದೂ ಹೇಳಿ ಮರೆಯಾದನಂತೆ. ಬೆಳಗಾದ ಕೂಡಲೆ ಅಧಿಕಾರಿಗಳು ಮೆರವಣಿಗೆಯೊಡನೆ ಬಂದು ರಾಜನ ಶ್ರೀಮುಖವನ್ನು ಹರಿಹರನಿಗೆ ಕೊಡುತ್ತಾರೆ. ಅದನ್ನು ನೋಡಿ ಹರಿಹರ 'ದೇವಾ, ಎಷ್ಟು ಕರುಣೆಯೋ ನನ್ನಲ್ಲಿ ನಿನಗೆ' ಎಂದು ಮೆಚ್ಚುತ್ತ ಪಲ್ಲಕ್ಕಿಯನ್ನು ಹತ್ತಿ ಮಾರ್ಗದಲ್ಲಿ ಬರುವಾಗ ಪಂಪಾಶತಕವನ್ನು ಹೇಳುತ್ತ ಬಂದನಂತೆ. ಇದೇ ಕಥೆ ಕೆಳಗಿನ ಪದ್ಯದಲ್ಲಿ ಅಡಗಿರುವಂತಿದೆ.

೧ನರರಂ ಸೇವಿಪ ಜೀಯ ಜೀಯೆನುತುಮಿರ್ಪೇನೆಂದೊಡಂ ದೈನ್ಯಮು
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂದಂದು ಶಂ
ಕರನಂ ಶಾಶ್ವತನಂ ಕೃಪಾಜಲಧಿಯುಂ ಕಂಡೆಂ ವಿರೂಪಾಕ್ಷನಂ ॥

ಭಕ್ತಿ ಜ್ಞಾನ ವೈರಾಗ್ಯಗಳನ್ನು ಕುರಿತು ಹೇಳುವುದು ಶತಕ ಸಾಹಿತ್ಯದ ಸಾಮಾನ್ಯ ಲಕ್ಷಣ. ಹರಿಹರನು ವೈರಾಗ್ಯ ಭಕ್ತಿಗಳಿಗೆ ಪ್ರಾಮುಖ್ಯ ಕೊಟ್ಟಿದ್ದಾನೆ. ಚಿಕ್ಕಂದಿನಲ್ಲಿ ಇತರ ವಿಷಯಗಳಲ್ಲಿ ಆಸಕ್ತನಾಗಿದ್ದು ಶಿವಧ್ಯಾನ ಮಾಡಲು ಹೊತ್ತಿಲ್ಲದೆ ಅನ್ಯಾಯವಾಗಿ ಕಾಲ ಕಳೆದೆನಲ್ಲ ಎಂದು ಮರುಗಿ ಶಿವನನ್ನು ಹೀಗೆ ಬೇಡುತ್ತಾನೆ:

೨ಸತಿ ಪುತ್ರರ್ ಮಿತ್ರರಾಪ್ತರ್ ತನುಧನಮನವೆಂಬಿಂತಿವಂ ನಿತ್ಯಮೆಂದು
ಚ್ಚತರವ್ಯಾಸಂಗದಿಂ ಮೆಯ್ಯಱಿಯದೆ ಮರುಳಾಗಿರ್ದೆನೆನ್ನಂ ದುರಾಶಾ
ವೃತನಂ ದುರ್ಮೋಹಿಯಂದುಸ್ತರತರವಿಷಯವ್ಯಾಪ್ತನಂ ದುರ್ಧರೈನೋ
ಹತನಂ ದುರ್ಬೋಧನಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ ॥

ಶಿವನೇ ಸರ್ವಸ್ವವೆಂದೂ ಅವನೊಬ್ಬನೇ ದೇವರೆಂದೂ ನಂಬಿ ಅವನ ವೇಷಭೂಷಣಗಳನ್ನು ಮೆಚ್ಚಿ ವರ್ಣಿಸಿ ಅವನನ್ನು ಸಾಕ್ಷಾತ್ತಾಗಿ ಕಂಡಂತೆ ಭಕ್ತಿಯ ಉನ್ಮಾದದಿಂದ ಹರಿಹರನು ಕುಣಿದಾಡುತ್ತಾನೆ. ಶಿವಭಕ್ತರು ಪ್ರತ್ಯಕ್ಷ ಶಿವಸ್ವರೂಪರೇ ಆಗಿರುವುದರಿಂದ ಅವರನ್ನು ಸತ್ಕರಿಸಿದರೆ ಶಿವಸೇವೆ ಆದಂತೆಯೇ. ಶರಣನು ಸಂಸಾರಿಯಲ್ಲ, ಸತ್ಯವಂತನು, ಕಾಮವನ್ನು ತೊರೆದವನು, ಕ್ರೋಧವನ್ನು ಬಿಟ್ಟವನು, ಮಾಯೆಯನ್ನು ಗೆದ್ದವನು, ಶಾಂತನು. ಅವನ ಸಂಗ

---

೧ ಉಬ್ಬರಿಸುತ್ತ = ಅಧಿಕವಾಗುತ್ತ, ಎಂತಕ್ಕೆಯುಂ = ಹೇಗಾದರೂ, ಇರವಂ = ಸ್ಥಿತಿಯನ್ನು. ೨ ವ್ಯಾಸಂಗ = ಆಸಕ್ತಿ, ದುರ್ಧರ + ಏನಃ + ಹತನಂ = ಧರಿಸಲಸಾಧ್ಯವಾದ ಪಾಪದಿಂದ ಹೊಡೆಯಲ್ಪಟ್ಟವನು (ಅಧಿಕವಾದ ಪಾಪವುಳ್ಳವನು).

ಸಂಭಾಷಣೆಗಳು ಹರಿಹರನ ಹೃದಯಕ್ಕೆ ಇಂಪಾಗಿದ್ದುವು. ಭಕ್ತರನ್ನು ಹೊಗಳಿ, ಅವರ ಸದ್ಗುಣಗಳು ವರ್ಣನೆಗೆ ನಿಲುಕುವುವಲ್ಲವೆಂದೂ ಅವರು ಆಡಿದ್ದೇ ವೇದ, ನಿಂತ ನೆಲವೇ ದಿವ್ಯಕ್ಷೇತ್ರ, ಮಾಡಿದ್ದೇ ಆಚಾರ ಎಂದೂ ಅವರ ಮಹಿಮೆಗೆ ಹರಿಹರ ಮಾರು ಹೋಗಿದ್ದಾನೆ. ಭಕ್ತಿಯಿದ್ದರೆ ಸದಾಚಾರವೇತಕ್ಕೆ ಎಂದು ಕೇಳುತ್ತಾನೆ ಅವನು. ಮೊದಲು ಭಕ್ತಿಯನ್ನು ಸಂಪಾದಿಸಬೇಕು. ಅದಕ್ಕೆ ಕಾಮಕ್ರೋಧಾದಿಗಳ ತ್ಯಾಗ ಪ್ರಥಮ ಸೋಪಾನ. ಶರಣರ ಸೇವೆ ಎರಡನೆಯದು. ಅಹಂಕಾರ ವರ್ಜನೆ ಮೂರನೆಯದು. ಆತ್ಮನನ್ನು ಒಮ್ಮನಸ್ಸಿನಿಂದ ಶಿವನಿಗೆ ಅರ್ಪಣೆ ಮಾಡಿದರೆ ಬೇರೇನುಬೇಕು? ಮಿಕ್ಕ ಕ್ಷುದ್ರ ದೇವತೆಗಳ ಗೊಡವೆ ಏಕೆ? ತನ್ನನ್ನೇ ನಂಬಿದವರನ್ನು ಶಿವ ಕೈಬಿಡನು. ಅವನ ಕರುಣೆಯಿಂದ ಆನಂದದ ಲಹರಿ ಆತ್ಮನನ್ನು ಕವಿದು ನಿತ್ಯನನ್ನಾಗಿ ಮಾಡುತ್ತದೆ. ತನಗೆ ಎಂದು ಆ ಭಾಗ್ಯ ಲಭಿಸುತ್ತದೊ!

[೧]ಹರಣಂಗಳ್ ಕಳೆಯೇಱಿ ಲೋಚನಯುಗಂ ನೀರೇಱಿ ಮೈಯೆಲ್ಲವಂ
ಕುರುವೇಱಲ್ ನುಡಿ ಕಂಪವೇಱಿ ಕರಣಂಗಳ್ ಲೀಲೆಯೇಱಲ್ ಮೊಗಂ
ಸಿರಿಯೇಱಲ್ ತಲೆಗೇಱಿದುತ್ಸವದೆ ನಿನ್ನಂ ಪೂಜಿಸುತ್ತಾನುಮಾ
ದರದಿಂದೀಕ್ಷಿಸುತಾಡುತಿರ್ಪುದೆನಗಿನ್ನೆಂದೋ ವಿರೂಪಾಕ್ಷನೇ ॥

ಅವನ ಎದೆ ತುಡಿದಿರುವಷ್ಟು, ಕಣ್ಣಿಗೆ ಕಂಡ ವಿರೂಪಾಕ್ಷನನ್ನು ಸ್ತುತಿಸಿರುವಷ್ಟು, ತನ್ನ ಆತ್ಮವನ್ನು ಅವನಿಗೆ ಅರ್ಪಿಸಿ ಹಿಗ್ಗಿರುವಷ್ಟು ಬೇರಾವ ಕವಿಯ ಹೃದಯ ತುಡಿದಿದೆ, ಸ್ತುತಿಸಿದೆ, ಹಿಗ್ಗಿದೆ!

---

೧ ಹರಣಂಗಳ್ = ಪ್ರಾಣಗಳು, ಕರಣಂಗಳ್ = ಇಂದ್ರಿಯಗಳು, ಸಿರಿ = ಕಾಂತಿ.

(೨) ರಕ್ಷಾಶತಕ

ಇಲ್ಲಿಯೂ ಮೇಲೆ ಹೇಳಿದ ವಿಷಯಗಳನ್ನೇ ಪ್ರತಿಪಾದಿಸಿದ್ದಾನೆ ಕವಿ. ಈ ಶತಕ ಬರೆಯುವ ಕಾಲಕ್ಕೆ ಅವನ ಮನಸ್ಸು ಹೆಚ್ಚು ಪಕ್ವವಾಗಿದ್ದಂತೆ ಕಂಡುಬರುತ್ತದೆ. ಜೀವನದ ಗುರಿಯನ್ನು ಇಲ್ಲಿ ಹೆಚ್ಚು ವಿಶದವಾಗಿ ಕಂಡಿರುವಂತಿದೆ. ಮೊದಲಿನ ಉತ್ಸಾಹ ಸ್ವಲ್ಪ ನೊರೆಯಾರಿ ಸ್ತಿಮಿತಕ್ಕೆ ಬಂದು ಶಾಂತಿ ತುಂಬಿರುವುದು ತಿಳಿಯುತ್ತದೆ.

ಆರಂಭದಲ್ಲಿ ಮನುಷ್ಯಜನ್ಮದ ಕ್ಲೇಶಗಳನ್ನೂ ಕಾಮಕ್ರೋಧ ಮುಂತಾದ ಅಂತಶ್ಶತ್ರುಗಳ ಹಾವಳಿಯನ್ನೂ ಕವಿ ನಿರೂಪಿಸಿ ಅವುಗಳಿಂದ ಮನಸ್ಸು ಚಂಚಲವಾಗುವುದೆಂದು ತಿಳಿಸಿ ಶಿವನನ್ನು ಹೀಗೆ ಬೇಡಿದ್ದಾನೆ:

[೧]ಮನಮೆನ್ನಂ ದುರ್ವಿಕಾರಕ್ಕೆಳೆದಪುದು ಮನಂ ಮಾನಮಂ ನುರ್ಗುಗುಟ್ಟು
ತ್ತೆನಸುಂ ತಾಂ ವಹ್ನಿಯೊಳ್ ನೂಂಕಿದಪುದು ಮನವೀ ಮಾಯೆಯಂ ಬಿಟ್ಟು ನಿಮ್ಮಂ
ನೆನೆಯಲ್ಕಾನೀಯದಯ್ಯೋ ಶಿವನೆ ಭವನೆ ಕಾರುಣ್ಯ ವಾರಾಶಿಯೆನ್ನೀ
ಮನಮಂ ಸೈತಿಟ್ಟು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಮನಸ್ಸು ಸ್ಥಿರವಾಗಬೇಕಾದರೆ, ಮಾಯೆಯ ಮಂಜು ಹರಿಯಬೇಕಾದರೆ ಅನಾಸಕ್ತಿಯ ಕಟ್ಟು ಬೇಕು, ವೈರಾಗ್ಯದ ಭಾನು ಬೆಳಗಬೇಕು. ಅದಕ್ಕಾಗಿ ಕವಿಯ ಪ್ರಾರ್ಥನೆ:

[೨]ಪ್ರತ್ಯಕ್ಷಂ ಸತ್ತುಹೋಗುತ್ತಿದೆ ನರನಿಕರಂ ತಾನದಂ ಕಂಡು ಕಂಡುಂ
ನಿತ್ಯತ್ವಂಬೆತ್ತ ಪಾಂಗಿಂ ಪಳಿವ ಮುಳಿವ ಕಾಮಿಪ್ಪ ಕೋಪಿಪ್ಪ ಲೋಭಿ

---

೧ ಮಾನಮಂ = ಗರ್ವವನ್ನು, ಸೈತಿಟ್ಟು = ಸರಿಯಾಗಿಟ್ಟು.

೨ ಪಾಂಗಿಂ = ರೀತಿಯಿಂದ. ಪಳಿವ = ನಿಂದಿಸುವ, ಕಾಮಿಪ್ಪ = ಕಾಮಿಸುವ.

ಪ್ಪತ್ಯಂತಂ ಗರ್ವಿಪೆನ್ನೀ ಮನಕೆ ಪರಮ ವೈರಾಗ್ಯಮಂ ಕೊಟ್ಟು ಸತ್ಯಂ
ಸತ್ಯಂ ಸತ್ಯಾತ್ಮ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ॥

ವಿರಕ್ತಿಹುಟ್ಟಿ, ಬುದ್ಧಿ ಭದ್ರವಾಗಿ, ಆಸೆ ನೀಗಿ, ತಾಪತ್ರಯ ಓಂಗಿ, ಅಹಂಕಾರ ತೊಲಗಿ, ದುಶ್ಚಿಂತನೆ ಮಾಯವಾಗಿ, ಶಿವಪೂಜೆ ಶಿವಧ್ಯಾನ ಶಿವಶರಣರವಚನ ಸಂಕೀರ್ತನೆ ಸತ್ಕಾರ ಶಿವಸ್ತೋತ್ರ ಪಂಚಾಕ್ಷರೀ ಜಪಗಳಿಂದ ಮನಸ್ಸಿನ ಅಸ್ಪೃಶ್ಯತೆ ತೊಲಗಿ ಶಿವಾರ್ಪಣೆಗೆ ತಕ್ಕವನಾಗುತ್ತಾನೆ ಜೀವ. ಭಕ್ತಿಲಂಪಟತ್ವ ಉಂಟಾಗುತ್ತದೆ. ಆಗ ಜೀವನ ಮೊರೆಯನ್ನು ಶಿವ ಕೇಳುತ್ತಾನೆ; ಬಂದು ಕೈಯಿಟ್ಟು ರಕ್ಷಿಸುತ್ತಾನೆ:

೧ಕರೆವಲ್ಲಿಂ ಮುನ್ನ ವೋವೋ ಮಗನೆ ಮಗನೆ ಬಂದೆಂ ದಿಟಂ ಬಂದೆನೆಂದಾ
ದರದಿಂದಂ ನೀನೆ ಬಂದೆನ್ನವಯವವನಿತಂ ಮುಟ್ಟಿ ನೊಂದಾ ಬಳಲ್ದಾ
ಕರೆದಾ ಕಂದಾ ಎನುತ್ತಂ ಕೃಪೆಮಿಗೆ ನಲವಿಂ ನೋಡಿ ಕೊಂಡಾಡುತೆನ್ನೀ
ಶಿರದೊಳ್ ಕೈಯಿಟ್ಟು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ॥

ಈಶ್ವರ ಕಣ್ಣಮುಂದೆ ಸುಳಿದು ಸಂತೈಸುವಾಗ ಆತ್ಮವೆಂಬ ಪವಿತ್ರ ಫಲವನ್ನು ಅವನ ಪಾದಗಳಿಗೆ ಅರ್ಪಿಸಿ :

೨ನಿಮಗೆನ್ನಂ ಮಾಱಿಗೊಟ್ಟೆಂ ಹರಹರ ನಿಮಗೆನ್ನನ್ನೆ ತಾನೊತ್ತೆಗೊಟ್ಟೆಂ
ನಿಮಗೆನ್ನಂ ಸೂಱೆಗೊಟ್ಟೆಂ ನಿಮಗೆ ಹರುಸದಿಂದೊಚ್ಚತಂಗೊಟ್ಟೆನಾಹಾ
ನಿಮಗೆನ್ನಂ ಮಚ್ಚು ಗೊಟ್ಟೆಂ ಗುರುವೆ ಘನವೆ ಸಂತೋಷದಿಂದೊಪ್ಪುಗೊಟ್ಟೆಂ
ನಿಮಗೆನ್ನಂ ದೇವ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ॥

ಎಂದು ಬೇಡಿ ಕವಿ ತಾನೇ ಪಶುಪತಿಯ ಆಧೀನತೆಗೆ ಸಂದು ಯಾವ ಸಂತಾಪವೂ ಇಲ್ಲದೆ ಹಾಯಾಗಿದ್ದಾನೆ.

೩ಬಿಡೆನೀಶಾ ನಿಮ್ಮಪಾದಾಬ್ಜವನೆಲೆಲೆ ಬಿಡೆಂ ಸೀಳ್ದೊಡಂ ಪೋಳ್ದೊಡಂ
ಪೊಯ್ದೊಡದಂತಿಂತೆಂದುಮೆಂದುಂ ಬಿಡೆನಭವ ಬಿಡೆಂ ಸರ್ವಥಾ ಮಾಣೆನಾಂ

---

೧ ಓವೋ = ಓ + ಓ. ನೊಂದಾ = ನೊಂದೆಯಾ. ೨ ಒಚ್ಚತಂ ಗೊಟ್ಟೆನ್ = ಒಟ್ಟಿಗೇ ಕೊಟ್ಟೆನು, ಮಚ್ಚು = ಮೆಚ್ಚು. ೩ ಸೀಳ್ದೊಡಂ = ಸೀಳಿದರೂ, ಭಕ್ತ್ಯರ್ಥಿ = ಭಕ್ತಿಯನ್ನು ಅಪೇಕ್ಷಿಸುವವನು.

ಬಲ್ವಿಡಿದೆಂ ಮತ್ತತ್ತಮಿತ್ತಂ ಚಲಿಸೆನೆಲೆ ಮಮಸ್ವಾಮಿ ನಿಮ್ಮಾಜ್ಞೆಯಿಂದಂ
ಮೃಡನೇ ಭಕ್ತ್ಯರ್ಥಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ ॥

ಈ ಎರಡು ಶತಕಗಳಲ್ಲಿಯೂ ಕವಿ ತನ್ನ ಆತ್ಮದ ಭಕ್ತಿಭಾವದ ಬೆಳವಣಿಗೆಯನ್ನು ಯಥಾರ್ಥವಾಗಿ ಸರಳತೆಯಿಂದ ನಿರೂಪಿಸಿದ್ದಾನೆ. ಇವುಗಳಿಂದ ಅವನ ಹೃದಯದ ಪರಿಚಯು ಸಾಂದ್ರವಾಗಿ ನಮಗೆ ಆಗುತ್ತದೆ.

೪. ರಗಳೆಗಳು

'ರಗಳೆಯ ಕವಿ' ಎಂದು ಹರಿಹರನನ್ನು ಹಾಸ್ಯ ಮಾಡುವುದು ಸುಲಭ. ಆದರೆ ಆ ರಗಳೆಗಳ ಸ್ವಾರಸ್ಯವನ್ನು ಒಂದುಸಲ ತಿಳಿದವರಿಗೆ ಆವನು 'ರಸಿಕಚಕ್ರಿ' ಎಂಬ ಭಾವನೆ ಬರದೆ ಇರ ಲಾರದು. ಅವನ ಕೀರ್ತಿ ಮಾಸದೆ ನಿಂತಿರುವುದು ರಗಳೆಗಳಿಂದ. ಅವನ ಶಕ್ತಿ ಸಂಪೂರ್ಣವಾಗಿ ಇಲ್ಲಿ ಪ್ರಕಾಶವಾಗಿದೆ. ಕಥನ ಕಾವ್ಯಕ್ಕೆ ರಗಳೆ ಚೆನ್ನಾಗಿ ಹೊಂದುತ್ತದೆಂಬುದನ್ನು ಮೊದಲು ಮನಗಂಡು ಉಪಯೋಗಿಸಿದ ಧೀರ ಹರಿಹರ. ಅವನಿಗಿಂತ ಹಿಂದೆ ಅಲ್ಲೊಂದು ಇಲ್ಲೊಂದು ಎಂಬಂತೆ ಚಂಪೂಕಾವ್ಯದಲ್ಲಿ ರಗಳೆ ಬಳಕೆಯಲ್ಲಿತ್ತು. ಇದಕ್ಕೆ ಜೀವಕೊಟ್ಟು ಕುಣಿಸಿದವನು ಹರಿಹರ. ಅವನ ಚಿತ್ತವೃತ್ತಿಯ ವರ್ಣಚಿತ್ರ ಈ ರಗಳೆಗಳು. ಅದರ ದರ್ಶನದಿಂದ ಪುಲಕಿತರಾಗುತ್ತೇವೆ; ಅದರ ಮಹಿಮೆ ಅಂಥದು. ಆದ್ದರಿಂದಲೇ 'ವೀರಮಾಹೇಶ್ವರಾಚಾರಸಂಗ್ರಹ' ಎಂಬ ದೊಡ್ಡ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದ ನೀಲಕಂಠ ನಾಗನಾಥಾಚಾರ್ಯನು :

> ಯಃ ಪುರಾತನಚಾರಿತ್ರಂ ಕೃತವಾನ್ ದೇಶಭಾಷಯಾ
> ಪಂಪಾಹರೀಶ್ವರಂ ನೌಮಿ ಸಂಪಾದಿತಶಿವಾಸ್ಪದಂ ॥

ಎಂದು ಗೌರವದಿಂದ ಹರಿಹರನಿಗೆ ತಲೆಬಾಗಿರುವುದು. ಇದರ ಮುಂದೆ, ಹಿಂದೆ ಸೂಚಿಸಿದ ಪರಿಹಾಸ್ಯದ ಮಾತಿಗೆ ಬೆಲೆಯಿಲ್ಲ.

'ರಗಳೆ' ಎಂಬುದು ಒಂದು ಬಗೆಯ ಪದ್ಯಜಾತಿ. ಅದರಲ್ಲಿ ಮೂರು ಪ್ರಭೇದಗಳು ಪ್ರಸಿದ್ಧವಾಗಿವೆ. ಪ್ರತಿಯೊಂದು ಪಾದ ದಲ್ಲಿಯೂ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಬಂದರೆ ಮಂದಾನಿಲ; ಐದುಮಾತ್ರೆಯ ನಾಲ್ಕುಗಣಗಳು ಬಂದರೆ ಲಲಿತ;

ಮೂರು ಮಾತ್ರೆಯ ಎಂಟು ಗಣಗಳು ಬಂದರೆ ಉತ್ಸಾಹ. ಎರಡೆರಡು ಪಾದಗಳು ಒಟ್ಟಿಗಿರುತ್ತವೆ. ಅಂತ್ಯದಲ್ಲಿ ಪ್ರಾಸವಿರಬೇಕು; ಆದಿಯಲ್ಲೂ ಪ್ರಾಸವಿರಬಹುದು. ಹರಿಹರ ಎರಡನ್ನೂ ಇಟ್ಟುಕೊಂಡಿದ್ದಾನೆ. ಇಷ್ಟೇ ಚರಣಗಳಿರಬೇಕೆಂಬ ಕಟ್ಟಿಲ್ಲದಿರುವುದರಿಂದ ಕಥೆ ಹೇಳುವುದಕ್ಕೆ ಬಹಳ ಸೌಕರ್ಯ. ರಗಳೆಯ ಮೂರು ಪ್ರಭೇದಗಳನ್ನೂ ಹರಿಹರ ಬಳಸಿದ್ದಾನೆ. 'ರಗಳೆ' ಎಂದರೆ ಇಲ್ಲಿ ರಂಪು, ರಚ್ಚೆ, ಗಲಾಟೆ ಎಂದರ್ಥವಲ್ಲ. ಅದು ಒಂದು ಹಾಡಿನ ಮಟ್ಟು.

ಎಷ್ಟು ಜನ ಶಿವಭಕ್ತರ ಕಥೆಗಳನ್ನು ರಗಳೆಯಲ್ಲಿ ಹರಿಹರ ಬರೆದಿದ್ದಾನೆ ಎಂಬ ವಿಷಯ ನಿಶ್ಚಿತವಾಗಿ ಇನ್ನೂ ತಿಳಿದುಬಂದಿಲ್ಲ. ನೂರೊಂದು ರಗಳೆಗಳೆಂದು ಕೆಲವರೂ ನೂರಿಪ್ಪತ್ತು ರಗಳೆಗಳೆಂದು ಇತರರೂ ಹೇಳುತ್ತಾರೆ. ಈಗ ಸುಮಾರು ನೂರು ರಗಳೆಗಳು ದೊರೆತಿವೆ. ಒಂದೊಂದು ರಗಳೆಯಲ್ಲಿಯೂ ಒಬ್ಬೊಬ್ಬನ ಕಥೆಯಿದೆ. ಕಥೆ ದೊಡ್ಡದಾಗಿದ್ದಾಗ ಹರಿಹರನು ಅದನ್ನು ಒಡೆದು ಒಂದು ಭಾಗವನ್ನು ರಗಳೆಯಲ್ಲಿಯೂ ಇನ್ನೊಂದನ್ನು ಗದ್ಯದಲ್ಲಿಯೂ ಹೀಗೆ ಕ್ರಮವಾಗಿ ಬರೆದಿದ್ದಾನೆ. ಬರಿಯ ರಗಳೆಯಲ್ಲೇ ಬರೆದರೆ ಬೇಸರ ಉಂಟಾಗಬಹುದೆಂದು ಭಾವಿಸಿ ವೈವಿಧ್ಯಕ್ಕಾಗಿ ಗದ್ಯವನ್ನು ಉಪಯೋಗಿಸಿರುವುದು ಮೆಚ್ಚತಕ್ಕ ವಿಷಯ. ಒಂದೊಂದು ಭಾಗಕ್ಕೂ 'ಸ್ಥಲ' ಎಂಬ ಹೆಸರಿದೆ.

ಈ ಶಿವಶರಣರ ಕಥೆಗಳು ಹರಿಹರನಿಗೆ ಹೇಗೆ ಗೊತ್ತಾದುವು ಎಂಬುದನ್ನು ಹೇಳುವುದು ಕಷ್ಟ. ಅವನಿಗಿಂತ ಹಿಂದೆ ಯಾವ ಕನ್ನಡ ಕವಿಯೂ ಈ ಕಥೆಗಳನ್ನು ಬರೆದಿದ್ದಂತೆ ತಿಳಿದುಬಂದಿಲ್ಲ; ತೆಲುಗು ಕವಿಗಳೂ ಬರೆದಿದ್ದಂತೆ ಕಂಡುಬಂದಿಲ್ಲ. ಹರಿಹರನ ಕಾಲದಿಂದ ಈಚೆಗೆ ಹುಟ್ಟಿದ ಕನ್ನಡ ತೆಲುಗು ಗ್ರಂಥಗಳಲ್ಲಿ

ಮಾತ್ರ ಶಿವಭಕ್ತರ ವೃತ್ತಾಂತ ಹೇಳಿದೆ. ಆದ್ದರಿಂದ ಹರಿಹರನು ಕಥಾವಸ್ತುಗಳನ್ನು ಸಂಸ್ಕೃತದಿಂದಲೋ ತಮಿಳಿನಿಂದಲೋ ಎತ್ತಿಕೊಂಡಿರಬಹುದೆಂಬ ಆಲೋಚನೆ ಹೊಳೆಯುತ್ತದೆ. ಸಂಸ್ಕೃತದಲ್ಲಿರುವ ಸ್ಕಾಂದೋಪಪುರಾಣದಲ್ಲಿ ಈ ಶಿವಭಕ್ತರ ಮಹಾತ್ಮ್ಯೆ ವರ್ಣಿತವಾಗಿದೆ. 'ಶಿವರಹಸ್ಯ'ವೆಂಬ ಗ್ರಂಥದಲ್ಲಿಯೂ ಈ ಕಥೆಗಳಿರುವುವಂತೆ. ಇವುಗಳನ್ನೇನಾದರೂ ಹರಿಹರ ನೋಡಿದ್ದನೇ? ಈ ಗ್ರಂಥಗಳಲ್ಲಿ ಬರುವ ಶಿವಶರಣರ ಹೆಸರುಗಳು ಬೇರೆ ಭಾಷೆಯ ಹೆಸರುಗಳ ಸಂಸ್ಕೃತ ಭಾಷಾಂತರದಂತೆ ಕಾಣುತ್ತವೆ. ಉದಾಹರಣೆಗಾಗಿ, ಐಹಿಕರಿಪು ಅಥವಾ ಸ್ವಭಾವರಿಪು ಎಂಬ ಹೆಸರನ್ನು ನೋಡಬಹುದು; ಇದು ತಮಿಳಿನ ಇಹಃಪಗೆಯಾಂಡ ಎಂಬ ಹೆಸರಿನ ತರ್ಜುಮೆ ಎಂದು ತೋರುತ್ತದೆ. ಇಲಾನಂದ ಕುಟಿಮಾರ ಎಂಬ ಹೆಸರೂ ಇಳೈಯಾಂಡ ಗುಡಿಮಾರ ಎಂಬುದರ ರೂಪಾಂತರ. ಹರಿಹರನು ಈ ಸಂಸ್ಕೃತದ ಹೆಸರುಗಳನ್ನು ಉಪಯೋಗಿಸದೆ ಇರುವುದರಿಂದ ಅವನು ಮೇಲೆ ಹೇಳಿದ ಸಂಸ್ಕೃತದ ಆಕರಗಳಿಂದ ಕಥೆಗಳನ್ನು ಎತ್ತಿಕೊಂಡಿಲ್ಲವೆಂದು ಹೇಳಬಹುದು. ಕೊನೆಗೆ ಉಳಿಯುವುದು ತಮಿಳಿನ ಗ್ರಂಥಗಳು. ಹರಿಹರ ಇವುಗಳಿಂದ ಕಥೆಗಳನ್ನು ಆರಿಸಿಕೊಂಡಿರಬೇಕು. ಅರವತ್ತುಮೂವರು ಶಿವಭಕ್ತರ ಕಥೆಗಳನ್ನು 'ಪೆರಿಯಪುರಾಣಂ' ಎಂಬ ಹೆಸರುಳ್ಳ ತಮಿಳುಕಾವ್ಯದಲ್ಲಿ ಹೇಳಿದೆ. ಇದು ಹರಿಹರನಿಗಿಂತ ಪ್ರಾಚೀನವಾದ ಗ್ರಂಥ. ಎರಡನೆಯ ಕುಲೋತ್ತುಂಗನೆಂಬ ಚೋಳರಾಜನ ಕಾಲದಲ್ಲಿ (೧೧೩೩–೧೧೪೫) ಶೆಕ್ಕಿಜಾರ್ ಎಂಬ ಕವಿಯಿಂದ ಈ ಕಾವ್ಯ ರಚಿತವಾಯಿತು. ಹರಿಹರನು ಕೊಡುವ ಶಿವಶರಣಪುರಾತನರ ಹೆಸರುಗಳು 'ಪೆರಿಯಪುರಾಣ'ದ ಹೆಸರುಗಳನ್ನು ಹೋಲುತ್ತವೆ. ಅವನು ಈ ಕಾವ್ಯವನ್ನು ಓದಿರ

ಬೇಕು, ಅಥವಾ ಓದಿಸಿ ಕೇಳಿರಬೇಕು. ಅವನಿಗೆ ಸ್ವಲ್ಪಮಟ್ಟಿಗಾದರೂ ತಮಿಳುಭಾಷೆಯ ಪರಿಚಯವಿದ್ದಂತೆ ಕಾಣುತ್ತದೆ. ಅವನ ರಗಳೆಗಳಲ್ಲಿ ಬರುವ ಕುಶವ (= ಕುಂಬಾರ), ಅಂಬಲಂ (= ಸಭೆ), ತಿರುಪಾಡು (= ಸ್ತೋತ್ರ), ನಾಯನಾರ್ (= ಭಕ್ತ) ಮುಂತಾದ ಪದಗಳು ತಮಿಳಿನವು. ಹರಿಹರನಿಗಿಂತ ಹಿಂದಿನ ಯಾವ ಕನ್ನಡ ಕವಿಯೂ ಇಂತಹ ಪದಗಳನ್ನು ಉಪಯೋಗಿಸಿರುವಂತೆ ತಿಳಿದಿಲ್ಲ. ಇವು ಅವನಿಗೆ ತಮಿಳಿನಿಂದ ಬಂದಿರಬೇಕು. ಈ ಕಾರಣಗಳಿಂದ ಅವನು ತಮಿಳು ಸಾಹಿತ್ಯದಿಂದ, ಬಹುಶಃ 'ಪೆರಿಯ ಪುರಾಣ'ದಿಂದ ಈ ಕಥೆಗಳನ್ನು ಆರಿಸಿಕೊಂಡಿರುವನೆಂದು ಹೇಳಬಹುದು. ಕಥೆಗಳಲ್ಲಿ ಹರಿಹರನು ಕೆಲವು ಮಾರ್ಪಾಡುಗಳನ್ನು ಮಾಡಿದ್ದಾನೆ; ತನಗೆ ಬೇಡವಾದ ಭಾಗಗಳನ್ನು ಬಿಟ್ಟಿದ್ದಾನೆ. ಈ ವಿಷಯದಲ್ಲಿ ಇನ್ನೂ ಹೆಚ್ಚಾದ ಅಭ್ಯಾಸ ಕನ್ನಡಿಗರಲ್ಲಿ ನಡೆಯಬೇಕಾಗಿದೆ; ನಡೆದಿದ್ದರೆ ಬೆಳಕಿಗೆ ಬರಬೇಕಾಗಿದೆ.

ಅರುವತ್ತು ಮೂವರು ಪ್ರಾಚೀನ ಶಿವಭಕ್ತರು ಯಾರು ಯಾರು ಎಂಬುದನ್ನು ಸರಿಯಾಗಿ ಹೇಳುವಂತಿಲ್ಲ. ಒಂದೊಂದು ಗ್ರಂಥದಲ್ಲಿ ಒಂದೊಂದು ರೀತಿಯಾಗಿದೆ. 'ಪೆರಿಯಪುರಾಣ' ದ ಹೆಸರುಗಳಲ್ಲಿ ಕೆಲವು ಹರಿಹರನಲ್ಲಿಲ್ಲ. ಅಲ್ಲದೆ ಅರುವತ್ತು ಮೂರಕ್ಕಿಂತ ಹೆಚ್ಚಾದ ಹೆಸರುಗಳು ಅದರಲ್ಲಿ ಇರುವಂತೆ ಕಾಣುತ್ತದೆ. ಹೀಗೆಯೇ ಇತರ ಗ್ರಂಥಗಳಲ್ಲಿಯೂ ಕೆಲವು ಬೇರೆಬೇರೆ ಹೆಸರುಗಳು ಸಿಕ್ಕುತ್ತವೆ. ಅರುವತ್ತುಮೂವರ ಕಥಾಸಾರಾಂಶವನ್ನು ಕೊಟ್ಟಮೇಲೆ ಹರಿಹರನು ಕರಿಕಾಲ, ನಿಂಬಿಯಕ್ಕ, ಮಾದಾರ ಚನ್ನಯ್ಯ—ಈ ಮೂವರ ಕಥೆಗಳನ್ನೂ ಸೇರಿಸಿ ಒಟ್ಟು ೬೬ ಪುರಾತನರು ಎಂದು ಹೇಳಿದ್ದಾನೆ.

ರಗಳೆಗಳನ್ನು ಮೂರು ಪಂಗಡಗಳಾಗಿ ವಿಭಾಗಿಸಬಹುದು. ಕೆಲವು ಚಿಲ್ಲರೆ ರಗಳೆಗಳು ಹಂಪೆಯ ಕ್ಷೇತ್ರ, ಲಿಂಗಾರ್ಚನೆ, ವಿಭೂತಿ, ರುದ್ರಾಕ್ಷಿ ಮುಂತಾದುವುಗಳ ಮಹಿಮೆಯನ್ನು ಕುರಿತಿವೆ. ಇದುವರೆಗೆ ಇಂತಹ ೧೪ ರಗಳೆಗಳು ಸಿಕ್ಕಿವೆ. ಇವೆಲ್ಲ ಸೇರಿ ಒಂದು ಗುಂಪು. ೬೬ ರಗಳೆಗಳು ಮತ್ತೊಂದು ಗುಂಪು. ಮೂರನೆಯದಾಗಿ ಬಸವ, ಅಲ್ಲಮ, ಮಹಾದೇವಿಯಕ್ಕ ಮುಂತಾದ ನೂತನ ಶರಣರನ್ನು ಕುರಿತ ರಗಳೆಗಳು. ಕೊನೆಯ ಎರಡು ಪಂಗಡಗಳು ಮುಖ್ಯವಾದುವು.

ಪ್ರತಿಯೊಬ್ಬ ಭಕ್ತನೂ ತನಗೆ ಉಚಿತವೆಂದು ಕಂಡ ರೀತಿಯಲ್ಲಿ ಶಿವನನ್ನು ಮೆಚ್ಚಿಸುವುದಕ್ಕೆ ಪ್ರಯತ್ನಪಡುತ್ತಾನೆ. ಭಕ್ತಿಸಾಧನೆಯಲ್ಲಿ ಅನೇಕ ಮಾರ್ಗಗಳಿವೆ. ಸತಿಪತಿಭಾವ, ಸ್ವಾಮಿಭೃತ್ಯಭಾವ, ಸಖ್ಯಭಾವ, ಪಶುಪತಿಭಾವ, ವಾತ್ಸಲ್ಯಭಾವ—ಇವು ಮುಖ್ಯವಾದುವು. ಅಲ್ಲದೆ ಶಿವಮೂರ್ತಿಯ ದರ್ಶನ, ಸ್ಪರ್ಶನ, ಕ್ಷೇತ್ರಸೇವೆ, ದೂಪ, ನೈವೇದ್ಯ, ನೃತ್ಯ, ಗಾನ, ಅಭಿನಯ, ಶರಣಸೇವೆ, ಜಾಗರಣೆ, ದೇವಾಲಯ ನಿರ್ಮಾಣ, ಶ್ರವಣ, ಕೀರ್ತನೆ, ಜಪ, ಅಭಿಷೇಕ ಮುಂತಾದ ಪೂಜಾ ಕಾರ್ಯಗಳೂ ಭಗವಂತನ ಕರುಣೆಯನ್ನು ಪಡೆಯಲು ಸಾಧನಗಳಾಗಬಹುದು. ಇವುಗಳಲ್ಲಿ ಯಾವುದಾದರೂ ಒಂದನ್ನು, ಎಷ್ಟೇ ತೊಂದರೆಗಳು ಬರಲಿ, ನಡುವೆ ಬಿಡದೆ ನಿಷ್ಠೆಯಿಂದ ಆಚರಿಸಿದರೆ ಶಿವ ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ. ಈ ನಾನಾವಿಧಗಳಿಂದ ಭಕ್ತಿಸಾಧನೆಮಾಡಿದ ಶರಣರ ಮಹಿಮೆ ರಗಳೆಗಳಲ್ಲಿ ವರ್ಣಿತವಾಗಿದೆ.

ಮೇಲೆ ಕಂಡ ರಗಳೆಗಳ ಗುಂಪುಗಳಲ್ಲಿ ಮೊದಲನೆಯದಕ್ಕೆ ಸೇರಿದ 'ಪುಷ್ಪರಗಳೆ'ಯನ್ನು ಈ ಪುಸ್ತಕದ ಆರಂಭದಲ್ಲಿ ಆಗಲೇ ನೋಡಿದೆ. ಮಿಕ್ಕವುಗಳಿಂದ ಒಂದೆರಡು ರಗಳೆಗಳನ್ನು ರುಚಿಗಾಗಿ ಇಲ್ಲಿ ಕೊಡಬಹುದು.

(೧) ತಿರುನೀಲಕಂಠರ ರಗಳೆ

ಚೋಳದೇಶದ ಪೊನ್ನಾಂಬಲವೆಂಬ ಶಿವಪುರದಲ್ಲಿ ತಿರುನೀಲ ಕಂಠನೆಂಬ ಭಕ್ತನಿದ್ದನು. ಅವನ ಹೆಂಡತಿಯ ಹೆಸರು ಮುತ್ತೈದೆ. ಇಬ್ಬರಿಗೂ ಹದಿನಾರರ ಹರೆಯ. ಇಬ್ಬರೂ ಶಿವಭಕ್ತಿ ಮನದಲ್ಲಿ ಬಲಿತು ದಿನದಿನವೂ ಶಿವಪೂಜೆಯಲ್ಲಿ ನಿರತರಾಗಿ ಪರಮ ಭಕ್ತ ರಾಗಿದ್ದಾರೆ. ತಿರುನೀಲಕಂಠನು ನಿತ್ಯವೂ ಪೊನ್ನಾಂಬಲದ ದೇವಾಲಯಕ್ಕೆ ಹೋಗಿ ಅವನ ಪೂಜೆ ಮುಗಿಸಿಕೊಂಡು ನಡು ರಾತ್ರಿ ಮನೆಗೆ ಬರುವ ಪದ್ಧತಿ.

ಒಂದು ರಾತ್ರಿ ಅವನು ಬೀದಿಯಲ್ಲಿ ಬರುತ್ತಿರಲು ಉಪ್ಪರಿಗೆಯ ಮೇಲಿದ್ದ ವಿಲಾಸಿನಿಯೊಬ್ಬಳು ತಟ್ಟೆ ತೊಳೆದು ಚೆಲ್ಲಿದ ನೀರು ಅವನ ಮೇಲೆ ಬೀಳುತ್ತದೆ. 'ತಿರುನೀಲಕಂಠ' ಎಂದು ಶಿವ ಸ್ಮರಣೆ ಮಾಡಿದ ಅವನ ಶಬ್ದವನ್ನು ಒಳಗಿದ್ದ ಅವಳು ಕೇಳಿ ಭಯದಿಂದ ನಡುಗುತ್ತ 'ಭಕ್ತನಿಗೆ ಅಪಚಾರವಾಯಿತಲ್ಲಾ' ಎಂದು ಪೇಚಾಡುತ್ತ ಬಂದು ನಮಸ್ಕಾರ ಮಾಡಿ ಅವನನ್ನು ಮನೆಯೊಳಕ್ಕೆ ಕರೆದುಕೊಂಡು ಹೋಗಿ ಗಂಧದ ನೀರಿನಿಂದ ಸ್ನಾನ ಮಾಡಿಸಿ ರೇಷ್ಮೆ ಬಟ್ಟೆಯನ್ನುಡಿಸಿ ಹೂವಿನಿಂದ ಅಲಂಕರಿಸಿ ಕರ್ಪೂರದ ವೀಳಯಕೊಟ್ಟು 'ಸ್ವಾಮಿ, ನನ್ನ ತಪ್ಪನ್ನು ಕ್ಷಮಿಸಿ' ಎಂದು ಬೇಡುವಳು.

ತಿರುನೀಲಕಂಠ ಹೊರಟು ಮನೆಗೆ ಬರುತ್ತಾನೆ. ಮೈಗೆ ಬಳಿದಿದ್ದ ಗಂಧದ ಹೊಸಕಂಪು ಮನೆಯೊಳಗೆಲ್ಲ ಹರಡುತ್ತದೆ, ಎಂದಿನಂತಲ್ಲದೆ ನವೀನವಾಗಿರುವ ಸುಗಂಧ ಅವನ ಹೆಂಡತಿಯ ಸಂಶಯಕ್ಕೆ ಕಾರಣವಾಯಿತು. ಅವಳು ಮನಸ್ಸಿನಲ್ಲಿ ಏನೋ ಭಾವಿಸಿ ಮುಳಿದು,

[1]ಸಯುನದೊಳಗಕ್ಕೆಯುಂ ನೋಟದೊಳು ಮುಳಿಸುವುಂ
ಬಯಕೆಯೊಳು ಬಱಸುವುಂ ಮೌನದೊಳು ನುಡಿಯುವುಂ
ಮನದೊಳಗೆ ಚಿಂತೆಯುಂ ನೇಹದೊಳು ಕೋಪವುಂ
ನೆನಹಿನೊಳು ಬೆಱಗುವುಂ ತನುವಿನೊಳು ಬಿಸುಪ್ಪವುಂ

[2]ಬಯ್ತಿಡುತೆ ಬಂದು ಮಾನಿನಿ ಪತಿಯ ಕಾಲ್ತೊಳೆದು
ಸಯ್ತಾಗಲೆಡೆಮಾಡಿ ಬೋನಂಗಳಂ ಪಿಡಿದು
ಆರೈಸಲಿಕ್ಕಿ ತಾಂಬೂಲಾದಿಗಳನಿತ್ತು

ದೂರಿಸುತ್ತಂ ಪ್ರಸಾದವ ಸವಿದು ಭಯವೆತ್ತು
ಸಿರಿಮಂಚವನು ಪಚ್ಚಡಿಸಿಕೊಟ್ಟು ಸುಯ್ವುತುಂ
ತಿರುನೀಲಕಂಠ ಕುಶವರ ಕೆಲದೊಳೊಪ್ಪುತುಂ

ಬಾಡಿದ ಲತೆಯಂತೆ ಬೆನ್ನು ತಿರುಗಿಸಿ ಮಲಗಿದಳು. ಕಾರಣ ತಿಳಿಯದೆ ತಿರುನೀಲಕಂಠನು ಹೆಂಡತಿಯನ್ನು ಮುಟ್ಟಿ ಎಬ್ಬಿಸಲು ಅವಳು ಸಿಡಿಮಿಡಿಗೊಂಡು "ಮುಟ್ಟಿದೊಡೆ ಶಿವನಾಣೆ" ಎಂದು ಕೈಯನ್ನು ನೂಕಿದಳು. ಅವನು ಬೆದರಿ,

ಎಂದುವುಂ ಕೇಳದಕ್ಕರ ತನ್ನ ಕಿವಿದಾಗೆ
ನೊಂದು ಪವ್ವನೆ ಪಾಱಿ ಕರಗಿ ಕೊರಗುತ್ತ ಮಿಗೆ
ಅಳುಕಿ ಬಾಯಳಿದು ಬಸವಳಿದು ಕೂಳ್ಕುದಿಗೊಂಡು
ಬಳುಕಿ ಬೆದಬೆದ ಬೆಂದು ಕುದಿದು ಕೋಟಲೆಗೊಂಡು
[3]ಆಣೆಯೆಂಬಲಗಿನೇಱಾಗಲಾತನ ಕಿವಿಗೆ

ಅಂದಿನಿಂದ 'ಇಂದುಮುಖಿ ಇಟ್ಟಾಣೆ ತೀವಿತ್ತು'. ಇಬ್ಬರ ದೇಹಗಳಲ್ಲಿಯೂ ಅದು ಹೊಕ್ಕು ಬೆಳೆಯಿತು. ಏನಾದರೂ

---

೧ ಅಕ್ಕೆಯುಂ = ಅಳುವನ್ನು. ೨ ಬಯ್ತಿಡುತೆ = ಮುಚ್ಚಿಡುತ್ತ, ಸಯ್ತಾಗಲು = ಸರಿಯಾಗಲು. ಚೆನ್ನಾಗಲು, ಬೋನ = ಊಟ. ಆರೈಸಲು = ಊಟ ಮಾಡಲು. ದೂರಿಸುತ್ತಂ = ಚಿಂತಿಸುತ್ತ. ಪಚ್ಚಡಿಸಿಕೊಟ್ಟು = ಹಾಸಿ ಹೊದಿಸಿಕೊಟ್ಟು. ಕುಶವ = ಕುಂಬಾರ. ೩ ಅಲಗಿನ + ಏಱು = ಕತ್ತಿಯ ಗಾಯ.

ಒಬ್ಬರನ್ನೊಬ್ಬರು ಮುಟ್ಟದೆ ಶಿವನಾಣೆಯನ್ನು ಮೀರದೆ ನೇಮ ದಿಂದ ಇರುತ್ತಾರೆ. ಈ ವಿಷಯ ಅವರಿಬ್ಬರ ಹೊರತು ಯಾರಿಗೂ ತಿಳಿಯದು. ಶಿವನೊಬ್ಬ ಬಲ್ಲ.

ಹೀಗೆ ನೇಮ ನಡೆಯುತ್ತಿರಲು ವರ್ಷಗಳು ಉರುಳಿದುವು. ಅವರ ಯೌವನ ಜಾರಿ ತೊಂಬತ್ತರ ಮುಪ್ಪು 'ಆಣೆ ಪಕ್ವಕ್ಕೆ ಬಂದಂತೆ' ಬಂತು.

[೧]ಶಿವಭಕ್ತಿಸೋಪಾನದಂತೆ ತೆರೆಗಳು ಮಸಗೆ
ಶಿವನಲ್ಲದಾರು ಇಲ್ಲೆಂಬಂತೆ ತಲೆ ನಡುಗೆ
ಭವಿಗಳಂ ನೋಡೆನೆಂಬಂತೆ ಕಣ್ಣವೆ ಮುಗಿಯೆ

ನರೆ ಹೊಳೆಯಿತು, ನಡೆ ಉಡುಗಿತು, ಕೈ ನಡುಗಿತು. ನೇಮ ಮಾತ್ರ ಕುಗ್ಗಲಿಲ್ಲ; ಹೊತ್ತ ಆಣೆ ಬೆತ್ತದಂತೆ ಬೆಳೆಯಿತು.

ಶಿವನು ಅವರ ಮನಸ್ಸನ್ನು ಒರೆದು ನೋಡಬೇಕೆಂದು ಭಿಕ್ಷುಕನ ವೇಷತಾಳಿ ಕೈಯಲ್ಲಿ ಪಾತ್ರೆಯನ್ನೂ ಕೋಲನ್ನೂ ಹಿಡಿದುಕೊಂಡು ಬಂದು ಅವರ ಮನೆಯ ಮುಂದೆ ನಿಂತನು. ಭಕ್ತ ಎದುರು ಗೊಂಡು, ಕಾಲನ್ನು ಸುಖದ ಕಣ್ಣೀರಿನಿಂದ ತೊಳೆದು, ಕಿಂಕರತೆ ಯನ್ನು ತಳೆದು "ಎಲೆ ದೇವದೇವ, ಬಿಜಯಂಗೈದ ಕರುಣಮಂ ನಲಿದು ಬೆಸಸುವುದು" ಎನ್ನಲು, ಆ ಭಿಕ್ಷುಕ "ನನಗೇನೂ ಬೇಡ, ನನ್ನ ಹತ್ತಿರ ಈ ಪಾತ್ರೆಯಿದೆ, ಅದನ್ನು ಸ್ವಲ್ಪಕಾಲ ನಿನ್ನಲ್ಲಿಟ್ಟು ಕೊಂಡಿರು ನಾನೇ ಬಂದು ತೆಗೆದುಕೊಳ್ಳುತ್ತೇನೆ" ಎಂದನು. ತಿರುನೀಲಕಂಠ ಹಾಗೆಯೇ ಆಗಲೆಂದು ಆ ಪಾತ್ರೆಯನ್ನು ಭದ್ರ ವಾಗಿ ಪೆಟ್ಟಿಗೆಯಲ್ಲಿಟ್ಟು ತಾನೇ ಕಾವಲು ಕೂತನು.

---

೧ ತೆರೆಗಳು=ಮಡಿಕೆಗಳು, ಸುಕ್ಕುಗಳು, ಭವಿಗಳಂ= ಶಿವಭಕ್ತರಲ್ಲ ದವರನ್ನು.

ಮರುದಿವಸ ಭಿಕ್ಷುಕ ಬಂದು 'ಕೊಡು ಕೊಡು, ನನ್ನ ಪಾತ್ರೆಯನ್ನು' ಎಂದು ಉರವಣಿಸಿ ರೇಗಿ ಕೇಳಿದಾಗ ತಿರುನೀಲಕಂಠ ಪೆಟ್ಟಿಗೆ ನೋಡುತ್ತಾನೆ, ಅದರಲ್ಲಿ ಪಾತ್ರೆ ಇಲ್ಲ;

ನುಡಿಯಲಱಿಯದೆ ಕರಗಿ ಕೊರಗಿ ಕಡುಭೀತಿಯಿಂ
ನೆಲಸಂ ಬಗಿದು ಪುಗಲು ಬಯಸುತಂ ಬಾಡುತಂ
ತಲೆವಾಗಿ ಸಿಗ್ಗಾಗಿ ಮರುಳಾಗಿ ನೋಡುತಂ

ಇರಲು, ಭಿಕ್ಷುಕ ಕೆರಳಿ :

[೧]ಗಂಟಲಂ ಕೊಯ್ದಿರೇ ತೋಱಿರೇ ಪೆಟ್ಟಿಗೆಯ
ಉಂಟುಂಟು ಭಕ್ತರೆಂದಿರಿಸಿದೆನಿದೀ ಪರಿಯ
ಅಪ್ಪುದಂ ಬಪ್ಪುದಂ ಬಲ್ಲೆನೇ ಶಿವ ಎನುತೆ
ಒಬ್ಬರುಂ ಸಾಕ್ಷಿಯಿಲ್ಲೆಂತು ಮಾಡುವೆನೆನುತ
ಪೆಟ್ಟಿಗೆಯನೊಮ್ಮೆವರ ಮೋಱಿಗಳನೊಮ್ಮೊಮ್ಮೆ
ದಿಟ್ಟಿಸಿಯೆ ನೋಡುತಂ ಮರುಳಾಗುತೊಮ್ಮೊಮ್ಮೆ
ಲೇಸು ಲೇಸೆನುತ ಪೆಟ್ಟಿಗೆಯ ನೋಡುತಲಂದು
ಬಿಸುಟನಲ್ಲಿಂದ ಹೊಱಯಿಂಕೆ ಕೋಪಿಸಿ ನಿಂದು
ಆಹಾಹ ಹಸನಾಯ್ತು ಕುಡಿರೇಕೆ ಪಾತ್ರೆಯುಂ
ಓಹೋಹೋ ಇಂತು ಕೊಂಡವರುಂಟೆ ಪಾತ್ರೆಯುಂ
ಏನೊ ಪೆಟ್ಟಿಗೆಯೆ ತಿಂದುದೊ ನೆಗಳು ನುಂಗಿತೊ
ಮೋನದಿಂದಿರ್ದೊಡಿದಱೊಳು ಪಾತ್ರೆ ಇಂಗಿತೋ

ಎಂದು ಸೂರು ಕಿತ್ತುಹೋಗುವ ಹಾಗೆ ಕೂಗುತ್ತ "ಇನ್ನು ನನ್ನಲ್ಲಿ ತಪ್ಪಿಲ್ಲ, ನಡೆಯಿರಿ ಚಾವಡಿಗೆ" ಎಂದು ಅವರಿಬ್ಬರನ್ನೂ ಒಡಗೊಂಡು ದಾರಿಯಲ್ಲಿ ಕಂಡವರಿಗೆಲ್ಲ ದೂರುತ್ತ ನೆರೆದ ಸಭೆಯ ಮುಂದೆ ನಿಲ್ಲುತ್ತಾನೆ.

ಅವರು ಎಂಥ ಭಕ್ತರೆಂಬುದನ್ನು ಊರೇ ಬಲ್ಲುದು. ಅವರೇಕೆ

---

೧ ನೆಗಳು = ಮೊಸಳೆ. ಮೋನ = ಮೌನ.

ಚಾವಡಿಗೆ ಬಂದರೆಂದು ಸಭೆ ಆಶ್ಚರ್ಯ ಹೊಂದುತ್ತದೆ. ಧರ್ಮಾಧಿಕಾರಿ ಸುದ್ದಿ ಏನೆಂದು ಕೇಳಿದಾಗ ತಿರುನೀಲಕಂಠ ಸಂಕಟದಿಂದ ಸುಮ್ಮನಿರಲು, ಭಿಕ್ಷುಕ :

ಅವರನೇನೆಂದು ಕೇಳ್ದಪಿರಾನೆ ಪೇಳ್ದಪೆಂ
ಅವರ ಪರಿಯೆಲ್ಲವಂ ತಿಳಿಯಲಾನುಸುರ್ದಪೆಂ

ಎಂದು ಪಾತ್ರೆಯ ವಿಷಯವನ್ನು ತಿಳಿಸಿ, ವ್ಯಂಗ್ಯವಾದ ಮಾತುಗಳಿಂದ :

ಪಿರಿಯರೀ ಪಾತ್ರೆಯಂ ನುಂಗಿಕೊಂಡಿರ್ದಪರು
ಈ ಪರಿಯ ಹೊಸತು ನಿಸ್ಸೀಮರಂ ನೋಡಿರೇ
ಭಾಪುರೇ ಸಾಧುಗಳಿರಾ ಪಾತ್ರೆಯಿಾಯಿರೇ
ಇಲ್ಲಿ ಪುರದೊಳಗಿರುವ ಪಿರಿಯರೇನಲ್ಲರೇ
ಅಲ್ಲದಿರೆ ಎಮ್ಮ ಪಾತ್ರೆಯ ಕೊಳಲ್ ಬಲ್ಲರೇ
ಉಂಟುಂಟೆ ವರಭಕ್ತರಿವರೆ ಪಿರಿಯರ್ ಧರೆಗೆ
ಉಂಟುಂಟಿವರು ಮಾನ್ಯರಾಗಿಹರು ನಿಮ್ಮೊಳಗೆ

ಎಂದು ಕೂಗಾಡಿ ಸಭೆಯ ಎದುರಿಗೆ ಮಾನ ಕಳೆಯಲು ತಿರುನೀಲಕಂಠ 'ಕಣ್ಣ ನೀರಂ ತುಂಬಿ' :

[೧]ಇರಿಸಿತುಂಟಾ ಪಾತ್ರೆ ಕೆಟ್ಟುದುಂಟದು ದಿಟಂ
ಪರಿಹರಿಸಿ ಕೊಳ್ಳೆವಾವೆಂಬುದೆಮಗಟಮಟಂ
ಇದಕಿನ್ನವರ ಕರುಣವೇ ಹರಣವಿನ್ನೆಮಗೆ
ಇದಕಿನ್ನು ನುಡಿಯಿಲ್ಲ ಮೋನವೇ ಶರಣೆಮಗೆ
ಪಿರಿದು ಮಾತೇಕೆ ಸಿಲ್ಕಿದೆವೆಮಗೊಡೆಯರಿಲ್ಲ

ಎಂದು "ಭಿಕ್ಷುಕನನ್ನು ಸುಮ್ಮನೆ ತೊಂದರೆ ಪಡಿಸಬೇಡಿ, ಆ ಪಾತ್ರೆಗಾಗಿ ನಾವಿಬ್ಬರೂ ನಮ್ಮನ್ನು ಮಾರಿಕೊಂಡಿದ್ದೇವೆ, ಅವ

---

೧ ಅಟಮಟಂ = ಮೋಸ, ಸುಳ್ಳು.

ರೇನು ಬೇಕಾದರೂ ಮಾಡಲಿ, ಸಿದ್ಧರಾಗಿದ್ದೇವೆ” ಎಂದು ಒಪ್ಪಿ ಮರೆಹೋಗುತ್ತಾನೆ.

ಆ ಸಭೆ ಮರುಗಿ ಪಂಚಾಯಿತಿ ಮಾಡುತ್ತ “ಅಯ್ಯಾ ಭಿಕ್ಷುಕ, ಆ ಪಾತ್ರೆಗೆ ಬದಲು ಚಿನ್ನದ ಪಾತ್ರೆ ಕೊಡಿಸುತ್ತೇವೆ, ತೆಗೆದುಕೊ, ಇವರನ್ನು ಸುಮ್ಮನೆ ಪೀಡಿಸಬೇಡ, ಕರುಣೆ ತೋರಿಸು” ಎಂದು ಕೇಳಿಕೊಳ್ಳಲು ಅವನ ಕೋಪ ಇನ್ನೂ ಮಸಗಿತು :

[1]ತೊನೆದು ಬಸುಜಿಂ ಪೊಸೆದು ಹಾಯ್ದು ನೆಲನಂ ತಿರುಗಿ
ಅಕ್ಕಟಾ ಪುಣ್ಯಪಾಪದ ಪೊಲಬನಜಿಯಿರೇ
ಒಡಲಪ್ಪುದುಸುರಪ್ಪುದಾಯುಪಪ್ಪುದು ಪಾತ್ರೆ
ತೊಡವಪ್ಪುದೆಮಗೆ ತವನಿಧಿಯಪ್ಪುದಾ ಪಾತ್ರೆ
ಅದಕೆ ಹೊನ್ನಂ ಗಿನ್ನು ಸರಿಯೇ ಇದೇ ಮಾತು
ಅದಕೆ ಪರುಸಂ ಗಿರುಸ ಓಹೊ ಬೇಡಾ ಮಾತು
ಪಾಪಕರ್ಮರು ನುಡಿಯಿರೇ ನುಡಿಯಿರೇ ಎನುತ

ಭಕ್ತನನ್ನು ಭಿಕ್ಷುಕನು ಕೋಪದಿಂದ ಒದೆಯುವಂತೆ ಮುಟ್ಟಿ ಪುಳಕಿಸುವನು ; ಹೊಡೆಯುವಂತೆ ಸೋಕಿ ಹಿಗ್ಗುತ್ತಿರುವನು. ಆದರೆ ಅಷ್ಟಕ್ಕೇ ಬಿಡುವುದಿಲ್ಲ. ಇನ್ನೂ ಪರೀಕ್ಷಿಸಬೇಕೆಂದು :

[2]ಕೊಲ್ವಂತೆ ಘೂರ್ಮಿಸುತೆ ಕೆಕ್ಕಳಿಸಿ ನೋಡುತ್ತೆ
ಗೆಲ್ವಂಗವಿಲ್ಲಿವರನೆಂಬಂತೆ ನೋಡುತ್ತೆ
ಹಳವಳಿಸಿ ಹಲುಬುತಾ ಪಾತ್ರೆಯಂ ಕರೆವುತಂ
ಕಳವಳಿಸಿ ಪಾತ್ರೆ ಪಾತ್ರೇ ಎಂದು ಕೂಗುತಂ

---

೧ ತೊನೆದು = ಹಿಂದಕ್ಕೆ ಮುಂದಕ್ಕೆ ಓಲಾಡಿ. ಪೊಲಬನು = ದಾರಿಯನ್ನು. ತೊಡವು = ಒಡವೆ. ತವನಿಧಿ = ಅಕ್ಷಯವಾದ ಸಂಪತ್ತು, ಪರುಸ = ಮುಟ್ಟಿದ್ದನ್ನೆಲ್ಲ ಚಿನ್ನವನ್ನಾಗಿ ಮಾಡುವ ಕಲ್ಲು ಅಥವಾ ಮಣಿ. ೨ ಕೆಕ್ಕಳಿಸಿ = ವಿಕಾರವಾಗಿ ಹೆದರಿಸಿ, ಹಳವಳಿಸಿ = ಮನಸ್ಸು ಕದಡಿ.

ಇರಲು "ಈ ಜಗಳ ತೀರ್ಮಾನಕ್ಕೆ ಬರುವಂತಿಲ್ಲ" ಎಂದು ಸಭೆ ಸುಮ್ಮನಾಯಿತು. ಭಿಕ್ಷುಕನು ಮೇಲೆ ಬಿದ್ದು ಮಾತಾಡುತ್ತ "ಹೋಗಲಿ ನಾನೇ ಸೋತವನು. ಇವರೇ ಗೆದ್ದವರು. ಹೊಡೆದರೂ ಬಡಿದರೂ ಹೇಳದ ಹಟಮಾರಿಗಳಿವರು. ಇವರಿಬ್ಬರೂ ಕೈಕೈ ಹಿಡಿದುಕೊಂಡು ಇಲ್ಲಿ ನೆರೆದವರ ಮುಂದೆ ಪ್ರಮಾಣ ಮಾಡಿ ಈ ಕೊಂಡದಲ್ಲಿ ಮುಳುಗಿದರೆ ಸಾಕು" ಎಂದು ಒಂದು ಉಪಾಯ ಹೇಳಿದನು.

ತಿರುನೀಲಕಂಠ ಏನು ಬೇಕಾದರೂ ಮಾಡಲು ಸಿದ್ಧನಿದ್ದನು. ಆದರೆ ಹೆಂಡತಿಯ ಕೈಹಿಡಿಯುವುದು ಹೇಗೆ? ಹೊತ್ತ ವ್ರತಕ್ಕೆ ಬೆಲೆಯಿಲ್ಲವೆ? ಭಿಕ್ಷುಕನ ಉಪಾಯ ತನ್ನನ್ನು ಅಲಗಿನಿಂದ ಸೀಳುವಂತೆ ಆಗಲು ಸಿಗ್ಗಿನಿಂದ ಸುಯ್ದು :

೧ಕಯ್ಯ ಪಿಡಿಯಲ್ವೇಳ್ದನೆಂತು ಮಾಡುವೆನಿದಂ
ಅಯ್ಯ ಭಕ್ತಂ ನೋಡ ಬಯಲಿಗಿಕ್ಕಿದನಿದಂ
ಎಂತುಸುರಿದಪೆನಿನ್ನದೆಂತು ಪೇಳ್ದಪೆನಿದಂ
ಎಂತು ಮಾಡುವೆನೆಂತು ಬಯ್ತಿಡುವೆನಿಂತಿದಂ
ಪಿಡಿಯಬಾರದು ಪಿಡಿಯದುದ ಪೇಳ್ದೊಡದು ಡಂಬು
ನಡೆತಂದು ಮಂಟಪದ ನಡುವಿರ್ಪುದಿದು ಡಂಬು
ಕಳ್ಳನಿವನೆಂದೆನಲಿ ಕಡುಪಾಪಿಯೆಂದೆನಲಿ
ಬಳ್ಳಿಹುಸಿಕಂ ಬಱಿಯ ಕೋಪಿ ಇವನೆಂದೆನಲಿ
ಶಿವಭಕ್ತಿಡಂಭನೆಂದೆನಿಸಲಾಱೆಂ ಶಿವನೆ
ಭವನೆ ನಿನ್ನಾಣೆಯಂ ಹೇಳಲಾರ್ಪೆನೆ ಹರನೆ
ತೋಱುವೆನೆ ಬೀಱುವೆನೆ ಎನ್ನ ಶಿವನಾಜ್ಞೆಯಂ
ದೂಱುವೆನೆ ಸಾಱುವೆನೆ ಎನ್ನೊಡೆಯನಾಣೆಯಂ

---

೧ ಡಂಬು=ಕಪಟ. ಬಳ್ಳಿಹುಸಿಕಂ=ಬಳ್ಳಿಯಂತೆ ಉದ್ದವಾದ ಸುಳ್ಳನ್ನು ಹೇಳುವವನು.

ಇದಱಿಂದ ನೊಂದಡೇಂ ಇದಱಿಂದ ಬೆಂದಡೇಂ
ಇದಱಿಂದಲಳಿದಡೇಂ ಇದಱಿಂದ ಸತ್ತಡೇಂ
[೧]ಇನ್ನೇವೆನಿನ್ನೇವೆನಯ್ಯೋ ಮಹಾದೇವ
ಇನ್ನೇನನೆಂದಪೆಂ ಕರುಣಿಸು ಮಹಾದೇವ
ಇರ್ದಿರ್ದದೃಶ್ಯವಾಗೆನೆ ಭಸ್ಮವಾಗೆನೇ
ಇರ್ದ ನೆಲನೊಳಕೊಳ್ಳದೇ ಜೀರ್ಣವಾಗೆನೇ
ಏಕೆ ಸಿವನಿನಿತುದಿನವಿರಿಸಿದಂ ತಾನೆನ್ನ

ಎಂದು ಒಳಗೊಳಗೆ ಧರ್ಮಸಂಕಟದಿಂದ ಬೇಯುತ್ತ, ಚಿಂತಿಸುತ್ತ ಕಂದಿ ಕಳವಳಿಸಿ ಮಾತು ಹೊರಡದೆ, ಕಷ್ಟದಿಂದ:

ಪಿಡಿಯೆನೆನ್ನಾ ಸತಿಯ ಕಯ್ಯನೇನಾದೊಡಂ
ಪಿಡಿಯೆನೀ ಧರೆ ಮೇಲೆ ಕೆಡೆದಡಂ ಸತ್ತಡಂ

ಎಂದು ಸಭೆಗೆ ತಿಳಿಸಿಬಿಟ್ಟನು.

ಭಿಕ್ಷುಕ ಗಹಗಹಿಸಿ ನಕ್ಕು "ಕೇಳಿದಿರಾ ಇವರ ಮಾತನ್ನು, ನಂಬಲಾದೀತೆ" ಎಂದು ಅವರ ಹತ್ತಿರ ಹೋಗಿ ಕುಣಿಯುತ್ತ 'ಬಾಯ್ಗೆ ಬಂದ ಕಟಕಿಯನಾಡಿ':

[೨]ಏನೇನದೆಂತೆಂತು ಕೈಗಳಂ ಪಿಡಿಯಿರೇ
ಏನು ನೀವಿರ್ದು ನೆಲದೊಳು ಇಂತು ನುಡಿವಿರೇ
ಹರೆಯವಿದು ನುಡಿವುದಿದು ಕೇಳ್ದಿರೇ ಕೇಳ್ದಿರೇ
ಇರಲಿದಾಡುವ ಮಾತು ಅಱಿದಿರೇ ಅಱಿದಿರೇ
ಕಯ್ಯಂ ಪಿಡಿಯೆನೆಂಬ ನುಡಿಯಂತೆ ಪಾತ್ರೆಯುಂ
ಅಯ್ಯಯ್ಯೊ ಕೊಳ್ಳೆನೆಂಬೀ ನುಡಿ ಧರಿತ್ರಿಯುಂ
ಠಕ್ಕಿಕ್ಕದೇ ಇವರ ನುಡಿ ಸತ್ಯದಂದದಿಂ
ಮಿಕ್ಕವರ್ ಮರುಳಾಗರೇ ಇವರ ವೇಷದಿಂ
[೩]ಕವಿಲೆಯಾಕಾರದ ಹುಲಿಯ ಚರಿತವಯ್ಯಯ್ಯ

---

೧ ಇನ್ನು + ಏವೆನು = ಇನ್ನು ಏನುಮಾಡಲಿ. ೨ ಹರೆಯ = ಪ್ರಾಯ, ವಯಸ್ಸು. ಠಕ್ಕಿಕ್ಕದೇ = ಮೋಸಪಡಿಸದೇ. ೩ ಕವಿಲೆಯಾಕಾರದ = ಹಸುವಿನ ಗೂಪದ, ಇರುವು = ಸ್ಥಿತಿ, ಇರುವಿಕೆ.

ಭುವನಕ್ಕೆ ಹೊಸತು ನಿಮ್ಮಿರ್ಬರಿರವಯ್ಯಯ್ಯ
ಇಂತಿದೊರ್ಡಂ ಪಾತ್ರೆ ಬಿಡುವೆನೇ ಕಪಟರಿರ
ಎಂತುವುಂ ಗಂಟಲಿಂದಿಳಿವುದೇ ಭಕ್ತರಿರ

ಎಂದು ಆಕ್ಷೇಪಿಸುತ್ತ ಭಕ್ತಪ್ರೇಮಿ ಭಿಕ್ಷುಕ ಅವರನ್ನು ತಿರುಗಿ ಹೊಡೆದು ಬಡಿದು ಆನಂದಲೀಲೆಯನ್ನು ಅನುಭವಿಸಿದನು. ತಿರುನೀಲಕಂಠನಾದರೋ :

೧ಒದೆಯಲೆಂದವ್ವಳಿಸೆ ಮೈಯನಿದಿರೊಡ್ಡುವಂ
ಪದೆದು ಬಯ್ದಡೆ ನಲಿನಲಿದು ಕಿವಿಯನಾನುವಂ
ನಿಂದಿಸಿದೊಡದುವೆ ತೊಡವೆಂದು ಮೈವೆಚ್ಚುವಂ
ಬಂದು ಬಡಿಯಲ್ ಪುಳಕವೃಂದಮಂ ಧರಿಯಿಪಂ
ಏನೆಂದೊಡಂ ಹಸಾದಂ ದೇವ ಎನುತಿರ್ಪ
ಏನೆಂದೊಡಂ ದೇವ ಕರುಣೆಸೆಂದೆನುತಿರ್ಪ

ಶಂಕರನು ಸಾಕಾಗಿ ಭಕ್ತರನ್ನು ಗೆಲ್ಲುವುದು ಅಸಾಧ್ಯವೆಂದು ಬೇರೊಂದು ದಾರಿ ಕಾಣಿಸುತ್ತಾನೆ :

೨ಹಿಂದಣ ನುಡಿಗಳೇಕೆ ನಿಮ್ಮ ಮುಂದೊಲಿದಿಂದು
ಕಯ್ಯಂ ಪಿಡಿಯೆನೆಂಬ ಶುಚಿತನವದಂತಿರ್ಕೆ
ಮೆಯ್ಯ ಸೋಂಕೆನುಮೆಂಬ ಪೆರ್ಬುಸಿಯದಂತಿರ್ಕೆ
ಈ ಲಾತಕೋಲನೆರಡುಂ ದೆಸೆಯೊಳಿರ್ಬರುಂ

ಹಿಡಿದುಕೊಂಡದಲ್ಲಿ ಮುಳುಗಿ ಪ್ರತಿಜ್ಞೆ ಮಾಡಲಿ ಎಂದು ಹೇಳು ತ್ತಾನೆ. ಈ ಮಾತು ಕೇಳಿ ಆ ಭಕ್ತ ಗಂಡ ಹೆಂಡಿರು ತಡೆಬಿಟ್ಟ ಹಾಗಾಗಿ ಉಬ್ಬುತ್ತ ಆನಂದದಿಂದ ಕುಣಿಯುತ್ತ "ಒಪ್ಪಿದೆ ಒಪ್ಪಿದೆ" ಎಂದು ಹೇಳುತ್ತ ಕೋಲಿನ ತುದಿಯನ್ನು ಹಿಡಿದು :

---

೧ ಅವ್ವಳಿಸೆ = ಮೇಲೆ ನುಗ್ಗಲು. ಪದೆದು = ಆಸೆಪಟ್ಟು. ೨ ಪೆರ್ಬುಸಿ = ದೊಡ್ಡ ಸುಳ್ಳು. ಲಾತಕೋಲು = ಹಿಡಿದ ಕೋಲು.

ಇರಿಸಿದರಿವರ್ ಪಾತ್ರೆಯುಂ ಕೊಳ್ಳಿವಾವುದಂ
ಹರ ನೀನೆ ಬಲ್ಲೆ ತಾನೇನಾದುದೆಂಬುದಂ

ಎನ್ನುತ್ತ ಕೊಂಡದಲ್ಲಿ ದುಮುಕಿದರು.

ಸಭೆ ಆಶ್ಚರ್ಯಪಡುತ್ತಿರಲು ಅವರಿಬ್ಬರೂ ಹದಿನಾರರ ಹರೆಯದವರಾಗಿ ಮೊದಲಿಗಿಂತ ನೂರ್ಮಡಿ ವಿಲಾಸವನ್ನು ಹೊಂದಿ ಮೇಲೆದ್ದುಬಂದರು. ಇತ್ತ 'ಜಗಳದ ಗುರುಗಳು' ವೇಷವನ್ನು ತೆಗೆದುಹಾಕಿ ನಿಜರೂಪವನ್ನು ತಾಳಿದರು.

ಜಡೆ ಚಂದ್ರಕಳೆ ನೊಸಲ ಕಣ್ ನಾಗಕುಂಡಲಂ
ತೊಡಿಗೆಯುಹಿ ಕಱೆಗೊರಲು ಮಿಸುಪ ಮುಖಮಂಡಲಂ
ಕರವೊಪ್ಪೆ ರವಿಕೋಟಿತೇಜಮಂ ಮಸುಳಿಸುತ

ಇರಲು, ತಿರುನೀಲಕಂಠರು ಕಂಡು :

[೧]ಪರಿತಂದು ಚರಣತಲದಲ್ಲಿ ದೊಪ್ಪನೆ ಕೆಡೆದು
ಹರನ ಚರಣಂಗಳಂ ಬಿಗಿದಪ್ಪುತಂ ಪಿಡಿದು
ದೇವ ನಿನ್ನ ಮಱಿಸಿ ಎನ್ನನಿಂತಿಱಿವರೇ
ದೇವ ಈವೊಡಲೊಳಿರ್ದೆನ್ನ ಮನವಱಿವರೇ
ಆನೊರ್ಬನೆಂದು ಗಹನಂ ಮಾಡಿ ಬರ್ಪುದೇ
ಅನಾವನೆಂದು ನೀನಿಂತೈದಿ ಬರ್ಪುದೇ
ಈ ಸೌಕುಮಾರ್ಯವಪ್ಪಂಗಲತೆಯುಂ ಬಿಟ್ಟು
ಆಸುರದ ನಿಷ್ಠುರದ ಜೋಹಮಂ ಮುಂತಿಟ್ಟು
ಇನಿತು ಬೇಗಂ ನುಡಿದು ಬಡಿದು ನೊಂದ್ಯೆ ತಂದೆ
ಇನಿತು ಬೇಗಂ ಮುಟ್ಟಿ ಮುಟ್ಟಿ ನೊಂದ್ಯೆ ತಂದೆ

ಎಂದು ನೊಂದು ಮರುಗಿ ಮೊರೆಯಿಟ್ಟನು. ಶಿವನು ಸುಪ್ರೀತನಾಗಿ :

---

೧ ಅಂಗಲತೆ=ಬಳ್ಳಿಯಂತಿರುವ ದೇಹ. ಆಸುರದ=ಭಯಂಕರವಾದ. ನಿಷ್ಠುರದ=ಕಷ್ಟವಾದ. ಜೋಹಮಂ=ವೇಷವನ್ನು. ಇನಿತು=ಇಷ್ಟು. ಬೇಗಂ=ಹೊತ್ತು, ವೇಳೆ.

ಆಣೆ ಬಿಟ್ಟುದು ಬಿಟ್ಟುದಿನ್ನಿನಿತು ವತ್ಸರಂ
ಕ್ಷೋಣಿತಲದೊಳಗೆ ಸುಖದಿಂದಿರ್ದನಂತರಂ
ಬನ್ನಿಮೆಂದನಿತು ದಿನವಿರಿಸಿ ಬಳಿಕುತ್ಸವದಿ

ಅವರನ್ನು ಕೈಲಾಸಕ್ಕೆ ಕೊಂಡೊಯ್ದು ಗಣಪದವಿಯನ್ನಿತ್ತು :

ಹಂಪೆಯ ವಿರೂಪಾಕ್ಷನನವರತವೊಪ್ಪಿದಂ.

ಈ ಕಥೆಯ ಮುಖ್ಯ ಉದ್ದೇಶ ಶಿವನ ಆಣೆಯ ಮಹತ್ವವನ್ನು ತೋರಿಸುವುದು. ಆದರ ಸುತ್ತ ರೇಷ್ಮೆ ಗೂಡಿನಂತೆ ಕಥೆ ಕಟ್ಟಿದೆ. ಕಥೆಯ ರಚನೆ ಹೆಜ್ಜೆ ಹೆಜ್ಜೆಗೆ ಕುತೂಹಲವನ್ನು ಕೆರಳಿಸುತ್ತ ವೇಗವಾಗಿ ಮುಂದೆ ಓಡುವಂತಿದೆ. ಸಂಭಾಷಣೆ ಸನ್ನಿವೇಶ ರಚನೆಗಳಲ್ಲಿ ಉತ್ತಮವಾದ ಅಭಿರುಚಿಯೂ ಪ್ರಮಾಣ ಪರಿಜ್ಞಾನವೂ ಭಾವಾವೇಶಗಳ ಮೊರೆತವೂ ಪ್ರಕಟವಾಗಿವೆ. ಪಾತ್ರಗಳ ಮನೋಧರ್ಮ ಬಿಚ್ಚಿ ಕಾಣುತ್ತಿದೆ. ತಿರುನೀಲಕಂಠನ ಧರ್ಮಸಂಕಟದ ಚಿತ್ರ ಸೊಗಸಾಗಿದೆ; ಶಿವನ ಆಟ ರಸದೂಟೆಯಾಗಿದೆ. ವರ್ಣನೆಗಳಲ್ಲಿ ಸಂಯಮವೂ ಔಚಿತ್ಯವೂ ತುಂಬಿವೆ. ಲೀಲಾಜಾಲವಾಗಿ ಹರಿಯುವ ವಾಗ್ಧಾರೆ ಬೆರಗುಗೊಳಿಸುವಂತಿದೆ; ಜಲಪಾತದಂತೆ ನಿರಂತರವಾಗಿ ಘೋಷಿಸುತ್ತಿದೆ. ಇಲ್ಲಿನ ಕಲೆ ನಯವಾದ ಪೊಳಪಾದ ಕುಸುರಿ ಕೆಲಸ. ಇದಕ್ಕಿಂತ ಏನು ಬೇಕು ಕಾವ್ಯ !

(೨) ಗುಂಡಯ್ಯನ ರಗಳೆ

ಭಲ್ಲುಕೆ ಎಂಬ ಊರಲ್ಲಿ ಗುಂಡಯ್ಯನೆಂಬ ಕುಂಬಾರನಿದ್ದನು. ತನ್ನ ಕಸುಬಿನಿಂದ ಬಂದ ಹಣವನ್ನೆಲ್ಲ ಶಿವಭಕ್ತರ ಸೇವೆಗಾಗಿ ವೆಚ್ಚಮಾಡಿ ಊಟ ನಿದ್ದೆಗಳನ್ನು ಮರೆತು [೧]ಕಾಯಕವನ್ನು

---

೧ ಕಾಯಕ=ಶಿವಾರ್ಪಿತವಾದ ಕಸುಬು.

ನಡಸುತ್ತ ಉತ್ತಮ ಶಿವಭಕ್ತನಾದನು. ಶಿವನ ಮಂದಿರಕ್ಕೆ ಹೋಗಿ ದಿನವೂ ತನಗೆ ಸಹಜವಾದ ರೀತಿಯಿಂದ ಆವನನ್ನು ಪೂಜಿಸುತ್ತ, ತಾನು ಮಡಕೆತಟ್ಟುವ ತಾಳಕ್ಕೆ ಸರಿಯಾಗಿ ಶಿವ ಕುಣಿಯುವಂತೆ ಮಾಡಿದನು. ವಿಶ್ವರೂಪಿ ರುದ್ರನ ಲೀಲಾ ನಾಟ್ಯವನ್ನು ಹರಿಹರನ ಬಾಯಿಂದಲೇ ಕೇಳೋಣ:

[೧]ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ
ಸುಖದಾಟಂ ತನ್ನಂ ಬೆಂಬತ್ತಲು
ಸುಖಮುಖದಿಂದಂ ಮನಮಂ ಸುತ್ತಲು
ದಶಭುಜಮಂ ದಿಕ್ತಟಕಂ ಪಸರಿಸಿ
ಎಸೆವ ಕರಂಗಳನೆತ್ತಲ್ ನೇಮಿಸಿ
ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೊತ್ತಲ್
ಜಡೆಗಳ್ ಬೆಂಬಳಿವಿಡಿದಾಡುತ್ತಿರೆ
ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ
ತಡಿಯೊಳ್ ಶಶಿಕಳೆಯಲ್ಲಾಡುತ್ತಿರೆ
ಕಡುಚೆಲ್ವಳಕಂ ಕುಣಿದಾಡುತ್ತಿರೆ
ಮಿಸುಗುವ ಡಮರುಗ ಢಂಢಂ ಢಣಲೆನೆ
[೨]ತಿಸುಳದಿ ಹರಿಯುವ ತಾರಂ ತಿರ್ರನೆ
[೩]ತಿರುಗುತ್ತಿರೆ ಅಹಿಗಳ್ ಹೆಡೆಯೆತ್ತಲು
ಕರಿಯ ತೊವಲ್ ನಭಮಂ ಜೋಹರಿಸಲು
ಸರಸಿಜಭವನ ಶಿರಂ ಬೊಬ್ಬಿಡುತಿರೆ
ಸುರರ ಶಿರೋಮಾಲೆಗಳುಲಿವುತ್ತಿರೆ

---

೧ ಆಡುವ = ಕುಣಿಯುವ. ೨ ತಿಸುಳ = ತ್ರಿಶೂಲ. ತಾರಂ = ನಕ್ಷತ್ರ.
೩ ಜೋಹರಿಸಲು = ವ್ಯಾಪಿಸಲು. ತೊಂಗಲ = ಕುಚ್ಚಿನ. ಉಗ್ಗಡಿಸು = ಪರಾಕು ಹೇಳು.

ಪೊಂಗೆಜ್ಜೆಗಳ ರವಂ ಘುಲುಘುಲುಕೆನೆ
ತೊಂಗಲ ಗಂಟೆ ಢಣಂ ಢಂಢಣಲೆನೆ
ಆಡಿದನಾಡಿದನಾಹಾ ಶಂಕರ—
ನಾಡಿದನಾ ಗುಂಡನ ಮುಂದೀಶ್ವರ—
ನಾಗಳ್ ಸುರಲೋಕದ ವಾದ್ಯಂ ಬರೆ
ಬೇಗಂ ತುಂಬುರರುಗ್ಗಡಿಸುತ್ತಿರೆ
ಮೃಡನವನೊಲ್ಲದೆ ಬೇಡೆಂದೆನುತಿರೆ
ಮಡಕೆಯ ವಾದ್ಯಂ ಸಾಲ್ಗೆಂದೆನುತಿರೆ
ಶಿವನಂ ಕಂಡಾ ಭಕ್ತಂ ಕುಣಿಯಲು
ಶಿವಭಕ್ತನ ಕೂಡಭವಂ ಕುಣಿಯಲು
ಇರ್ವರನೀಕ್ಷಿಸಿ ಗಣತತಿ ಕುಣಿಯಲು
ಸರ್ವ ಸ್ಥಾವರ ಜಂಗಮವಾಡಲು
ಮಡಕೆಯ ಶಬ್ದಕ್ಕಾಡುತ್ತಿರ್ದಂ
ಮೃಡನಖಿಳರುವೆರೆಸಾಡುತ್ತಿರ್ದಂ
ನಾನಾಮುಖದಾನಂದಂ ಪುಟ್ಟಲು
ನಾನಾರವಮಂಬರಮಂ ಮುಟ್ಟಲು

ನಟರಾಜನ ದಿವ್ಯಮೂರ್ತಿ ಮುಗಿಲಗಲ ಜಗದಗಲ ಹರಡಿ ಚೈತನ್ಯಮಯವಾಗಿ ಆನಂದನೃತ್ಯದಲ್ಲಿ ಮಗ್ನವಾಗಿರಲು ಗಗನದಲ್ಲಿ ನಿಂತು ನೋಡುತ್ತಿದ್ದ ಗಿರಿಜೆ, "ಸುಮ್ಮನಿದ್ದರೆ ಶಿವನ ರೀತಿ ಕೈಮೀರಿ ಹೋದೀತು" ಎಂದು ಹೆದರಿ ಅವನನ್ನು ಪ್ರಾರ್ಥಿಸಿ ಸಮತೆಗೆ ತಂದಳು. ಅನಂತರ :

ಕುಣಿದಾಡುವ ಗುಂಡಯ್ಯನನೀಕ್ಷಿಸಿ
ಜಳಪೂರಿತ ಲೋಚನದಿಂ ನೋಡುತೆ
ನಳನಳಿಪಂಗದಿ[೧] ಬಿಗಿಬಿಗಿದಪ್ಪುತೆ
ನೆಗೆದಂ ಗಗನತಳಕ್ಕೆ ಮಹೇಶಂ
ಬಗೆ ಮಿಗೆ ನಡೆತಂದಂ ಗಿರಿಜೇಶಂ

೧ ನಳನಳಿಪ = ಕೋಮಲವಾಗಿರುವ.

ಈ ರಗಳೆಯಲ್ಲಿ ಕಥೆ ಕಡಮೆ. ಅದನ್ನು ಒಂದು ಪಂಕ್ತಿಯಲ್ಲಿ ಹೇಳಿ ಮುಗಿಸಬಹುದು ; ಅಷ್ಟು ಸಣ್ಣದು ವಿಷಯ. ಹರಿಹರನ ಕೈಯಲ್ಲಿ ಅದು ಶಕ್ತಿಯ ಸಂತತಸ್ರೋತವಾಗಿ, ರೋಮಾಂಚ ಕಾರಕವಾದ ಕಾವ್ಯವಾಗಿ ಪರಿಣಮಿಸಿದೆ. ಅದರಲ್ಲಿ ಯಾವ ಭಾಗವೂ ರಸಹೀನವಾಗಿಲ್ಲ. ಕಾಸಿದ ಲೋಹ ಕಾವು ಹತ್ತಿ ಕೆಂಡವಾಗಿ ಕನಲಿ ಕೆಂಗಲಿಸಿ ವಿದ್ಯುತ್ಪ್ರಭೆಯ ನೀಲಿಮೆಯಿಂದ ಮಿಂಚಿ ಕರಗಿ ಉರಿನೀರಾಗಿ ಎರಕದಲ್ಲಿ ಹರಿದು ನೀರೂಡಿ ಘನೀ ಭೂತವಾಗಿ ಪ್ರತಿಮೆಯಾಗುವಂತೆ, ಹರಿಹರನ ಪ್ರತಿಭೆಯಿಂದ ಹರಿದು ಬಂದಿದೆ ಈ ಕಾವ್ಯ. ಅದರ ಸೌಂದರ್ಯವನ್ನು ಅನುಭವಿಸಿ ತಿಳಿಯಬೇಕು.

೫. ಹರಿಹರನ ಗದ್ಯ

ಹಿಂದಿನ ಕನ್ನಡ ಸಾಹಿತ್ಯದಲ್ಲಿ ಗದ್ಯ ಕಾವ್ಯಗಳು ಕಡಮೆ. ವಚನಕಾರರ ಕಾಲಕ್ಕೆ ಗದ್ಯ ಸ್ವಲ್ಪ ತಲೆಯೆತ್ತಿಕೊಂಡಿತು. ಆಡುವ ಮಾತನ್ನು ಅವರು ಬಳಸಲು ತೊಡಗಿದ್ದರಿಂದ ಕನ್ನಡ ಗದ್ಯ ಕಳೆಗೊಡಲು ಕಾರಣವಾಯಿತು. ಹರಿಹರನ ಕೈಯಲ್ಲಿ ಅದಕ್ಕೆ ಮಹೋನ್ನತಿ ಉಂಟಾಯಿತು. ಅದಕ್ಕೆ ಪ್ರಾಣಬಂದು ಎಂಥ ಭಾವವನ್ನಾಗಲಿ ಯಾವ ರಸವನ್ನಾಗಲಿ ಚಿಮ್ಮಿಸಲು ಸಮರ್ಥ ವಾಯಿತು. ನಂಬಿಯಣ್ಣ, ಬಸವರಾಜ, ಮಹಾದೇವಿಯಕ್ಕ–ಇವರ ಕಥೆಗಳಲ್ಲಿರುವ ಗದ್ಯ ಉತ್ಕೃಷ್ಟವಾದದ್ದು. ಪ್ರಕೃತ ನಂಬಿಯಣ್ಣನ ಕಥೆಯಿಂದ ಒಂದು ಗದ್ಯಭಾಗವನ್ನು ಇಲ್ಲಿ ಕೊಡಬಹುದು :

ಕೈಲಾಸದಲ್ಲಿದ್ದ ಪುಷ್ಪದತ್ತನು ಪಾರ್ವತಿಯ ಇಬ್ಬರು ಹೂವಾಡಿ ಗಿತ್ತಿಯರಲ್ಲಿ ಮೋಹಗೊಳ್ಳಲು ಶಿವನು ಅವನನ್ನು ಭೂಮಿಯಲ್ಲಿ ಹುಟ್ಟುವಂತೆ ನಿಯಮಿಸಿ ಆ ಹೂವಾಡಿಗಿತ್ತಿಯರನ್ನೂ ಮನುಷ್ಯ ಜನ್ಮಕ್ಕೆ ಕಳುಹಿಸಿ "ನಿಮ್ಮ ನಿಮ್ಮ ಇಷ್ಟಾರ್ಥವನ್ನು ಅಲ್ಲಿ ತೀರಿಸಿಕೊಳ್ಳಿ" ಎಂದು ಅಪ್ಪಣೆ ಮಾಡುತ್ತಾನೆ. ಪುಷ್ಪದತ್ತನು ನಂಬಿಯಣ್ಣನಾಗಿಯೂ ಹೂವಾಡಿಗಿತ್ತಿಯರು ಪರವೆ ಶಂಕಿಲೆ ಯರಾಗಿಯೂ ಚೋಳದೇಶದಲ್ಲಿ ಹುಟ್ಟಿ ಬೆಳೆಯುತ್ತಾರೆ. ತಾಯಿ ತಂದೆಗಳು ನಂಬಿಯಣ್ಣನನ್ನು ಅಲ್ಲಿನ ರಾಜ ನರಸಿಂಗಮೊನೆಯರಿಗೆ ದತ್ತು ಕೊಡುತ್ತಾರೆ. ಅವನು ಬೆಳೆದು ದೊಡ್ಡವನಾಗುತ್ತಲು, ರಾಜನು ಮದುವೆ ಮಾಡಬೇಕೆಂದು ಹೆಣ್ಣನ್ನು ಗೊತ್ತುಮಾಡಿ ಎಲ್ಲ ಸಿದ್ಧತೆಗಳನ್ನೂ ಮಾಡಿದನು. ಆದರೆ ನಂಬಿಯಣ್ಣನು ಪರವೆ ಶಂಕಿಲೆಯರನ್ನು ಪರಿಗ್ರಹಿಸಬೇಕೆಂದು ಶಿವನ ನೇಮ. ಅದ್ದರಿಂದ ಹೇಗಾದರೂ ಮಾಡಿ ಈ ಮದುವೆಯನ್ನು ತಪ್ಪಿಸ

ಬೇಕೆಂದು ಶಿವನು ಮುದುಕನ ವೇಷ ಧರಿಸಿ ಮದುವೆಯ ಮಂಟಪಕ್ಕೆ ಬಂದು ಗಲಾಟೆ ಮಾಡಿ "ನಂಬಿಯಣ್ಣ ನನ್ನ ತೊತ್ತಿನ ಮಗ" ಎಂದು ಕೂಗಾಡಿ ಹಾರಾಡುತ್ತಾನೆ. ಆ ಆರ್ಭಟದಿಂದ ಮದುವೆ ನಿಂತುಹೋಗುತ್ತದೆ. ಇದು ಸಂದರ್ಭ.

ಶಿವನು ಮಹಾ ವೃದ್ಧನಾಗಿ ಕೈಲಾಸದಿಂದ ಮದುವೆಯ ಮಂಟಪಕ್ಕೆ ಬಂದು:

ಮೆಲ್ಲಮೆಲ್ಲನೆಲ್ಲವಂ ನೋಡುತಂ ಮನದೊಳು ನಗುತೆ, ಕೋಲನೂಱುತೆ, ಕೆಮ್ಮಿ [೧]ಕುಮ್ಮುತೆ, ಸಾಲ್ಗೊಂಡಿರ್ದ ತುಪ್ಪದ ಕೊಡಂಗಳೊಳು ನಾಲ್ಕೆರಡ ನೆಡಹಿ ನಮಶ್ಶಿವಾಯ ಎಂಬ ವೃದ್ಧಧ್ವನಿ ಪುಟ್ಟೆ ಕೊಡಂಗಳ ಮೇಲೊಡ ಬಿರ್ದು, ಕುಳ್ಳಿರ್ದರ ಮುಖದೊಳಂ ಕಣ್ಣೊಳಂ ಮೆಯ್ಯೊಳಂ ತುಪ್ಪಂ ಚೆಲ್ಲಿರೆ ಎಲ್ಲರೆದ್ದು [೨]ಮಲ್ಲಳಿಗೊಂಡು ಘೊಳ್ಳೆಂದು ಬಿರ್ದು ವೃದ್ಧ ಮಾಹೇಶ್ವರನಂ ಮುತ್ತಿಕೊಂಡು ಎತ್ತಲನುವಾಗಿ ಮೆಲ್ಲನೆ [೩]ನೆಗೆಪಿ ನಿಂದಿರಿಸಲೊಂದೆರಡಡಿ ಯನಿಟ್ಟು [೪]ದಡದಡಿಸೆ, ನೋಡುವ ಜನವೆಲ್ಲಂ ಎಲೆಲೆ ವೃದ್ಧ ಬಿದ್ದನೆಂಬಲ್ಲಿಂ ಮುನ್ನಂ ನಿಲಲಾಱದೆ [೫]ಹಳಿಲನೆ ಘಳಿಗೆವಟ್ಟಲ ಮೇಲೆ ಬೀಳೆ ಕಳಸಿಗೆ ಒಡೆದು ಘಳಿಗೆವಟ್ಟಲು ಮುಱಿದು ತಂಡುಲಂ ಚೆಲ್ಲಿ ಜೋಯಿಸರೆಲ್ಲಂ ಕೆದಱಿ ಪೋಗೆ, ಬಿದ್ದೇಳಲಾಱದೆ [೬]ಹಮ್ಮೈಸಿದಂತಿರೆ, ಪರಿತಂದು ಕಣ್ಣೊಳಂ ಬಾಯೊಳಂ ನೀರಂ ತಳಿದು ಎಂತಕ್ಕೆ ಎಚ್ಚಱಿಸಿ ಎತ್ತುವರ ಕಯ್ಯ ಬಾಯೊಳೆ ಜೀವಂ ಪೋಪಂತಿರೆ, ಪಿಡಿಯಬಾರದು ಮುಟ್ಟಬಾರದು ನೋಡಬಾರದು ನುಡಿಸಲರಿದು, ಪಿಡಿದು ಬಿಟ್ಟಡೆ ತುಪ್ಪದ ಕೊಡನ ಮೇಲಲ್ಲದೆ ಬೀಳಂ; ಈ ವೃದ್ಧ ಬ್ರಾಹ್ಮಣನನೀ ಮುಪ್ಪಿನ ಮರುಳನನೀ ಗೌತಮನ ಗೋವನೀ ಬ್ರಹ್ಮೇತಿಕಾಱನನಾರ್ ಪೊಗಿಸಿದರಾರ್ ತಂದರ್ ಇದೇನಪಶಕುನ, ಇನ್ನೇನೀ ಮದುವೆ ಹಸನಾಗದೆನುತೆಲ್ಲರುಂ ಮೆಲ್ಲನೆ ಕಯ್ಯುಮಂ ಕಾಲುಮಂ ಪಿಡಿದೆತ್ತಿಕೊಂಡು

---

೧ ಕುಮ್ಮುತ್ತೆ = ಕುಟ್ಟುತ್ತ. ೨ ಮಲ್ಲಳಿಗೊಂಡು = ಗುಂಪಾಗಿ. ೩ ನೆಗಪಿ = ಎತ್ತಿ. ೪ ದಡದಡಿಸು = ತತ್ತರಿಸು. ೫ ಹಳಿಲನೆ = ಬೇಗನೆ. ೬ ಹಮ್ಮೈಸಿ ದಂತಿರೆ = ಮೂರ್ಛೆ ಬಿದ್ದಹಾಗೆ.

ಹೋಗಿ ತಮ್ಮಾಯುಷ್ಯ [೧]ಭೌಷಿಗಳಂ ಪೊಱಗಿಡುವಂತೆ ಚಪ್ಪರದ ಪೊಱಗೆ ಮೆಲ್ಲನಿಳುಪಿ, ಈ ವಿಪ್ರನಂ ಪುಗಲೀಯದಿರಿ ಈ ವೃದ್ಧನಂ ಪುಗಿಸದಿರಿ ಎಂದು ಬಾಗಿಲವಂಗಱುಹುತ್ತೆ ಕದವನಿಕ್ಕಿ ಒಳಗಂ [೨]ಹೋಗುವನಿಸಕ್ಕೆ ಅವರಿಂ ಮುನ್ನವೈತಂದು ಒಳಗಂಪೊಕ್ಕು ತೋರಣದ ತಳಿರಂ [೩]ಪಱಿದು [೪]ಶಿವದಿಡುತ್ತಿರಲವರ್ ಕಂಡು ಬೆಱಗಾಗಿ. ಈಗಳಿಂತು ಪೊಱಗಿರಿಸಲಾಗಳಂತೆ ಬಂದು ಮುಂದಿರ್ದಪನೀ ವೃದ್ಧಂ [೫]ಕಿಱುಕುಳನಲ್ಲ [೬]ಕಾರಣಿಕನಾಗಲ್ವೇಳ್ಕುವೆಂದು ನೋಡುತ್ತಿರೆ; [೭]ಯಷ್ಟಿಯಕೋಲಿಂ [೮]ಬಿಂಗಾರಿಗಳನಿಱಿದೊಡೆವುತ್ತಂ ಜಗಲಿಯುಂ ದರಿಗೆಡಹುತಂ ಪುಂಗಳವೆಲ್ಲ ವನಮುಂಗಳವಂ ಮಾಡುತ್ತಿರಲ್, ಅಲ್ಲಿಯ ಪಿರಿಯರುಂ ಮಾನ್ಯರುಂ ಕಂಡೆಲೆ ಅಪ್ಪರೆ ಇತ್ತ ಬಿಜಯಂಗೈವುದೆನೆ, ಕೇಳದಂತೆ ಮತ್ತೆ ಮತ್ತೆ ಶಿವದಿಡುತ್ತೆ, ಎನ್ನ ತೊತ್ತಿನ ಮಗನಂ ಕುಮಾರನೆಂದು ಸತ್ಕುಲಜನೆಂದು ಬಗೆದು ಹೆಣ್ಣಂ ಕೊಟ್ಟು ನಿಮ್ಮ ಕುಲಮಂ ಕೆಡಿಸಿಕೊಳ್ಳದಿರಿ, ನಾನೇನಾದೊಡಂ ಮದುವೆಯನಾಗಲೀಯೆಂ, ನೀವಿದಱಾದ್ಯಂತವನೇನೆಂದಱಿಯಿರಿ, ಆವಂ ನರಸಿಂಗವೊನೆಯರ್ ಪೆತ್ತ ಮಗನಲ್ಲಂ ಕೊಂಡು ಸಾಕಿದ ದತ್ತಪುತ್ರನವಂ ಶಿವಬ್ರಾಹ್ಮಣಂ ಸೌಂದರ ಪೆರುಮಾಳೆಯಲ್ಲಂ ಇವನ ಹೆಸರು ನಂಬಿ ಎನ್ನ ತೊತ್ತಿನಮಗಂ ಅದಕ್ಕೆ ಪ್ರಮಾಣಪತ್ರಮುಂಟೆಂದಾಸುರಂ ಮಸಗಲು; ಆ ಹೆಣ್ಣಿನ ತಾಯ್ತಂದೆಗಳುಂ ಕಂಡು ಕೌತುಕಂ ಬಟ್ಟು, ಎಮಗೆ ಈ ಮದುವೆಯುಂತಿರ್ಕೆ ಮುನ್ನವೀ ಬ್ರಾಹ್ಮಣನ ಬ್ರಹ್ಮಹತ್ಯಾದೋಷಂ ತಪ್ಪಿತಿದೆ ಸಾಲ್ಗುಂ; ಎಲೆ ಅಯ್ಯ ಚಿತ್ತೈಸೆಮ್ಮ ಮಾತಂ; [೯]ಸೀಂತಡೊಳಗಾಗಿ ಮಹಾಪ್ರತಿಷ್ಠೆಗಳಂ ಮಾಣ್ದು ಕಳೆವರಲ್ಲದೆ ಮಾಳ್ಪುದಿಲ್ಲ; ಪ್ರತ್ಯಕ್ಷ ಶಿವನಂತಿರ್ದ ನೀಮೇ ಬಂದು ತುಪ್ಪದ ಕೊಡನುಮನೊಡೆದು ಕೆಡಹಿ ತೋರಣದ ತಳಿರಂ ಪಱಿದು [೧೦]ತಿಱಿದು, ಕುಲಂ [೧೧]ಪೊಲ್ಲದೆಂದೆಂದ ಬಳಿಕ ಇನ್ನಾವ ಮೋಱೆಯ ಕೊಂಡು ಬಂದು ಮದುವೆಯಾದಪಂ, ಮುಂದಿಟ್ಟು ಮದುವೆಯ

---

೧ ಭೌಷಿ = ಭವಿಷ್ಯ (?). ೨ ಹೋಗುವ + ಅನಿಸಕ್ಕೆ = ಹೋಗುವಷ್ಟಕ್ಕೆ (ರಳ್ಳಿ). ೩ ಪಱಿದು = ಚೂರಾಗಿ ಹರಿದು. ೪ ಶಿವದಿಡು = ಶಿವಧೋ ಎಂದು ಕೂಗು. ೫ ಕಿಱುಕುಳ = ಸಾಮಾನ್ಯನಾದವನು. ೬ ಕಾರಣಿಕ = ಯಾವುದಾದರೂ ಕಾರ್ಯಸಾಧನೆಗಾಗಿ ಅವತಾರ ಮಾಡಿದವನು. ೭ ಯಷ್ಟಿಯ = ದೊಣ್ಣೆಯ, ೮ ಬಿಂಗಾರಿ = ಲೋಹದ ಪಾತ್ರೆ. ೯ ಸೀಂತಡೊಳಗಾಗಿ = ಸೀತ ಮಾತ್ರಕ್ಕೆ. ೧೦ ತಿಱಿದು = ಕೊಯ್ದು. ೧೧ ಪೊಲ್ಲದು = ಕೆಟ್ಟದ್ದು

ಮಾತನಾಡಿದಪೆವದಂತಿರ್ಕೆ; ನೀವಿಲ್ಲಿಂದಂ [೧]ಹದುಳಂ ಹೋದಡೆ ಸಾವಿರ ಮದುವೆಯುಂ ಮಾಡಿದ ಸಂತಸಂ ಆದಪುದು...ಬಿಜಯಂಗೈವುದು ಸ್ವಾಮಿ ಎನಲ್; ಅಲ್ಲಿಂ ತಳರ್ದು...

ತೂಕಮಾಡಿ ಆರಿಸಿದ ಉಚಿತ ಪದ ಪ್ರಯೋಗ, ಕಿವಿಗೆ ಇಂಪಾದ ಸರಣಿ, ಸರಳವಾದ ನಿರೂಪಣೆ, ಸಂದರ್ಭಕ್ಕೆ ತಕ್ಕಂತೆ ವಾಕ್ಯಗಳ ವೈವಿಧ್ಯ,—ಇವೆಲ್ಲ ಉತ್ತಮ ಗದ್ಯದಲ್ಲಿರಬೇಕಾದ ಲಕ್ಷಣಗಳು. ಮೇಲಿನ ಗದ್ಯಭಾಗದಲ್ಲಿ ಈ ಗುಣಗಳ ಜತೆಗೆ ಕವಿಯ ಸ್ಫೂರ್ತಿ ಆವೇಶಗಳೂ ಸೇರಿ ಅದು ಜೀವಂತವಾಗಿ ಕಳಕಳಿಸುತ್ತದೆ.

---

೧ ಹದುಳಂ ಹೋದಡೆ=ಕ್ಷೇಮವಾಗಿ ಹೋದರೆ.

೬. ಶೈಲಿ

ಬುದ್ಧಿಗೆ ಹೊಳೆದ ಆಲೋಚನೆಯನ್ನಾಗಲಿ ಮನಸ್ಸಿನಲ್ಲಿ ಮೂಡಿದ ಭಾವವನ್ನಾಗಲಿ ಮಾತಿನಲ್ಲಿ ಕಟ್ಟಿಡುವ ರೀತಿ ಶೈಲಿ. ಕವಿಯ ಅನುಭವವು ಎಷ್ಟು ಸಹಜವಾಗಿ ಓದುವವರಲ್ಲಿ ಉಂಟಾಗುತ್ತದೋ ಅಷ್ಟಷ್ಟು ಶೈಲಿ ಉತ್ಕೃಷ್ಟ. ಅದು ಒಬ್ಬೊಬ್ಬನಲ್ಲಿ ಒಂದೊಂದು ವಿಧವಾಗಿರುತ್ತದೆ. ಅವನ ಚಿತ್ತವೃತ್ತಿಗೆ ಅನುಸಾರವಾಗಿ ಅವನ ಶೈಲಿ. ಒಬ್ಬನ ಶೈಲಿಗೂ ಇನ್ನೊಬ್ಬನ ಶೈಲಿಗೂ ಏನು ವ್ಯತ್ಯಾಸವೆಂಬುದು ಅಭ್ಯಾಸಮಾಡಿ ಅನುಭವಿಸಿ ತಿಳಿಯಬೇಕಾದ ವಿಷಯ. ಕನ್ನಡ ಕವಿಗಳಲ್ಲಿ ತಮ್ಮದೇ ಆದ ಶೈಲಿಯನ್ನುಳ್ಳವರು ಎಲ್ಲೋ ಕೆಲವರು ಮಾತ್ರ. ಇಂಥವರಲ್ಲಿ ಹರಿಹರ ಒಬ್ಬ. ಅವನ ಶೈಲಿಯ ಸ್ವಭಾವವನ್ನು ಕುರಿತು ಇಲ್ಲಿ ಕೊಂಚ ಹೇಳಬಹುದು.

ಹರಿಹರನ ಶೈಲಿಯ ಮುಖ್ಯ ಲಕ್ಷಣ ಉತ್ಸಾಹ. 'ಉತ್ಸಾಹದಿಂ ಮೆಚ್ಚಿ ಪೇಳ್ದ ಗಿರಿಜಾಕಲ್ಯಾಣ ಕಾವ್ಯಂ' ಎಂಬ ಅವನ ಮಾತುಗಳಿಂದಲೇ ಇದು ತಿಳಿದುಬರುತ್ತದೆ. ಅವನ ಗಮನಕ್ಕೆ ಬಂದ ಯಾವ ವಿಷಯವಾದರೂ ಅಡಗಿಸಲಸಾಧ್ಯವಾದ ಭಾವಗಳನ್ನು ಅವನಲ್ಲಿ ಉಂಟುಮಾಡುತ್ತದೆ. ಅವು ನಾನು ಮುಂದೆ ತಾನು ಮುಂದೆ ಎಂದು ತಮ್ಮೊಳಗೆ ಹೊಯ್ದಾಡುತ್ತ ಸ್ಪರ್ಧಿಸುತ್ತವೆ. ಇದರಿಂದ ಅವನ ಮನಸ್ಸು ಭಾವಗಳ ನೃತ್ಯಶಾಲೆಯಾಗುತ್ತದೆ ಅವುಗಳನ್ನು ಎಷ್ಟು ವಿಧವಾಗಿ ಹೇಳಲು ಪ್ರಯತ್ನಿಸಿದರೂ ಅವನಿಗೆ ತೃಪ್ತಿಯಿಲ್ಲ. ಹೇಳಿದ್ದು ಸಾಲದು, ಇನ್ನೂ ಹೇಳಬೇಕು, ಇನ್ನೂ ಚೆನ್ನಾಗಿ ಹೇಳಬೇಕು ಎಂಬುದು ಅವನ ಮನಸ್ಸಿನ ಸ್ವಭಾವ. ಇದನ್ನೇ ಉತ್ಸಾಹ ಎಂದು ಅವನು ಕರೆದಿರುವುದು,

ಅವನ ಕಾವ್ಯಗಳಲ್ಲೆಲ್ಲ ಪದಗಳ, ಚಿತ್ರಗಳ, ನಾದಗಳ, ಭಾವಗಳ ಚೆಂಡಾಟವು ಕಾಣುತ್ತದೆ. ಪುಟ ಹೊಡೆದ ಚೆಂಡು ಕೊಂಚ ಎತ್ತರ ಹೋದರೆ ಅದು ಇನ್ನೂ ಮೇಲಕ್ಕೆ ನೆಗೆಯಲಿಲ್ಲವಲ್ಲಾ ಎಂದು ಮರಳಿ ಮರಳಿ ಹೊಡೆಯುವ ಹಾಗೆ ಹರಿಹರನ ಶೈಲಿ ಇದೆ. ಹಿಂದೆ ಕೊಟ್ಟಿರುವ ಕಾಮದಹನದ ಚಿತ್ರವನ್ನು ಸ್ಮರಿಸಿಕೊಂಡರೆ ಈ ವಿಷಯ ಸ್ಪಷ್ಟವಾಗುತ್ತದೆ. ಆ ದಳ್ಳುರಿಯ ದಾಳಿಯನ್ನು ಬಗೆಬಗೆಯಾಗಿ ಬಣ್ಣಿಸಿದರೂ ಕವಿಗೆ ತೃಪ್ತಿಯಿಲ್ಲದೆ ಮುಂದಕ್ಕೆ ಹೇಗೆ ಹೇಳಬೇಕೆಂಬುದು ತೋರದೆ 'ಅರರೇ ಭುಘುಗು, ಭಾಪುರೇ ಭುಗು ಭುಗು, ಪ್ರಜ್ವಾಲೆ ಮಜ್ಝುಯ್ಯ'. ಎಂದು ಆಶ್ಚರ್ಯ ಹರ್ಷಗಳನ್ನು ಸೂಚಿಸುವ ಪದಗಳನ್ನು ಬಳಸುತ್ತಾನೆ. ಅಲ್ಲಿಗೆ ಸ್ವಲ್ಪ ಅವನ ಉತ್ಸಾಹದ ಹೊಳೆಯ ಉಬ್ಬರ ಇಳಿದಂತೆ ಅವನಿಗೆ ಅನ್ನಿಸುತ್ತದೆ. ಉತ್ಸಾಹ ಅವನ ಸಂಗೀತಕ್ಕೆ ಶ್ರುತಿ ಇದ್ದಂತೆ. ಅವನ ಅನುಭವಕ್ಕೆ ಅದಾವ ತೀವ್ರತೆಯೋ ಶಕ್ತಿಯೋ ಶಿವನೇ ಬಲ್ಲ!

ಚಿತ್ರಮಯವಾದ ಶೈಲಿ ದೊಡ್ಡ ಕವಿಯ ಹುಟ್ಟು ಆಸ್ತಿ. ಹರಿಹರನ ರಗಳೆಗಳು ಒಂದೊಂದೂ ಹಲವು ಚಿತ್ರಗಳ ಸುರುಳಿ. ಅವನ್ನು ಬಿಚ್ಚಿ ವೇಗವಾಗಿ ತಿರುಗಿಸುತ್ತಾನೆ ಅವನು. ಕಣ್ಣ ಮುಂದೆ ಚಿತ್ರಗಳ ಮಾಲೆ ಸಜೀವವಾಗಿ ಸಂಚಾರ ಮಾಡುತ್ತದೆ, ಚಲನಚಿತ್ರವನ್ನು ನೋಡಿದಂತೆ ಅನುಭವ ಆಗುತ್ತದೆ. ಪ್ರತಿಯೊಂದು ರಗಳೆಯಲ್ಲಿಯೂ ಕಥಾನಾಯಕನ ದೇಶ, ಊರು, ಅಲ್ಲಿನ ಶಿವದೇವಾಲಯ, ಭಕ್ತನ ಓಡಾಟ. ಪೂಜೆ, ನಿಷ್ಠೆ, ಭಕ್ತಿ, ದಿನದಿನದ ಬದುಕು, ಅವನ ಮನಸ್ಸನ್ನು ಒರೆದು ನೋಡಬೇಕೆಂದು ಶಿವನಿಗೆ ಸಂಕಲ್ಪ ಬಂದು ವೇಷಧಾರಣೆ ಮಾಡುವುದು, ಪರೀಕ್ಷೆ, ಭಕ್ತನ ಗೆಲವು, ಪುಷ್ಪಕ ವಿಮಾನ, ಕೈಲಾಸ ಪ್ರಯಾಣ, ಶಿವನ

ಪ್ರಶಂಸೆ, ಸಭೆ—ಈ ಚಿತ್ರಗಳು ಒಂದಾದಮೇಲೊಂದು ಬರುತ್ತವೆ. ಉಸಿರಾಡದೆ ಎವೆಯಿಕ್ಕದೆ ಕುಳಿತು ನೋಡುವ ಕೆಲಸ ಓದುವವನದು. ಹಿಂದೆ ಕಾಣಿಸಿರುವ ರಗಳೆಗಳ ಭಾಗಗಳಿಂದಲೇ ಈ ವಿಷಯ ತಿಳಿದುಬಂದಿರಬೇಕು.

ಹರಿಹರನಿಗೆ ರೂಪಕನಿರ್ಮಾಣ ಶಕ್ತಿ ವಿಶೇಷವಾಗುಂಟು. ಒಂದು ವಸ್ತುವನ್ನು ಬಹಳ ಬೇಗನೆ ಭಾವಬಲದಿಂದ ಇನ್ನೊಂದನ್ನಾಗಿ ಮಾಡುವ ಕೌಶಲ್ಯ ರೂಪಕದ ಸಾರ; ಗಾಜಿಗೆ ರಸದ ಲೇಪಕೊಟ್ಟು ಕನ್ನಡಿಯು ಕಾಂತಿಯನ್ನು ತರುವಂತೆ. ಇಳೆಯಾಂಡ ಗುಡಿಮಾರನೆಂಬ ಭಕ್ತನ ಕಥೆಯಿಂದ ಇದಕ್ಕೆ ಒಂದು ಉದಾಹರಣೆ ಕೊಡಬಹುದು. ಆ ಭಕ್ತ ಒಕ್ಕಲಮಗ; ಅವನ ಕಸಬು ಬೇಸಾಯ. ಹರಿಹರನ ಕಣ್ಣಿಗೆ ಅದು ಭಕ್ತಿಕಾರ್ಯವಾಗಿ ಕಾಣುತ್ತದೆ.

ಸಮಚಿತ್ತವೆಂಬ ಭೂಮಿಯನೆ ಹಸನಾಗಿರಿಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿಷಟ್ಕಮಂ ತಂದು ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶ ನಿಷ್ಠೆಯಂ ತಳಿವ ಬೀಜಂ ಮಾಡಿ
ಸುರಚಿರ ಶಿವಜ್ಞಾನ ಸಸಿಗಳಂಕುರಿಸುತಿರೆ
ಹರನ ಪರಮಾನಂದ ರಸದ ಮಳೆ ಕಱೆವುತಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಕಿತ್ತು ಕಳೆವಂ ಕ್ಷುತ್ಪಿಪಾಸಾದಿ ಕಳೆಗಳಂ

ಹೀಗೆ ಶಿವಭಕ್ತಿಯ ಆರಂಬ ನಡೆಯುತ್ತಿತ್ತು. ಭಕ್ತಿಗೂ ಬೇಸಾಯಕ್ಕೂ ಸಾದೃಶ್ಯವು ಹರಿಹರನ ಬುದ್ಧಿಗೆ ಹೊಳೆದು ಭಾವಲೇಪದಿಂದ ಬೇಸಾಯ ಭಕ್ತಿಕ್ರಿಯೆಯಾಗಿಬಿಟ್ಟಿದೆ. ಕವಿಯ ಮನಸ್ಸು ಅನುಭವಿಸುವ ರೀತಿ ಇದು. ವಿರೂಪಾಕ್ಷನಿಗೆ ರೂಪಕಗಳ ಪುಷ್ಪಾಂಜಲಿಯನ್ನು ಸಮರ್ಪಿಸಿದ ರಸಜೀವಿ ಹರಿಹರ.

ಒಳಗಿನ ಶಕ್ತಿಯಿಂದ ಪ್ರಚೋದಿತವಾಗಿ ಅವನ ನಾಲಗೆ ಹಾಡುತ್ತದೆ; ಇಲ್ಲವೆಂದರೆ ಅದು ಬಿಡುವಂತಿಲ್ಲ. ಆದ್ದರಿಂದ ಅವನ ಕಾವ್ಯ ಯಾವಾಗಲೂ ಚಿಮ್ಮುವ ಚಿಲುಮೆ; ಶೈಲಿ ಪ್ರಯತ್ನ ರಹಿತವಾಗಿದೆ. ರಗಳೆಯ ಓಟಕ್ಕೆ ಯಾವ ತಡೆಯೂ ಇಲ್ಲ. ಆರಂಭವಾಗುವುದೇ ತಡ, ಗುರಿಮುಟ್ಟಿದ ಮೇಲೆಯೇ ಅದು ನಿಲ್ಲುವುದು, ಓಡಿ ಓಡಿ ನಿಟ್ಟುಸುರುಬಿಡುತ್ತ ನಿಲ್ಲುವ ಜೂಜು ಕುದುರೆಯಂತೆ. ಪ್ರಯತ್ನ ರಹಿತತೆ, ದ್ರುತಗತಿ—ಇವೆರಡೂ ಹರಿಹರನ ವಾಣಿಯ ಸಂಪತ್ತು. ಹಾಲು ಸಕ್ಕರೆಗಳಂತೆ ಹೊಂದಿ ಕೊಂಡಿವೆ ಅವು.

ಜೊತೆಗೆ ಅಪಾರವಾದ ಸ್ವಾತಂತ್ರ್ಯವೂ ಧೈರ್ಯವೂ ಆ ಶೈಲಿ ಯಲ್ಲಿ ಸೇರಿವೆ. ವ್ಯಾಕರಣ ಛಂದಸ್ಸುಗಳ ಕೆಲವು ನಿಯಮ ಗಳನ್ನು ಬೇರೊಂದು ಉದ್ದೇಶದಿಂದ ಮೀರುವುದಕ್ಕೂ ಅದು ಹಿಂಜರಿಯುವುದಿಲ್ಲ. ಮಂದಾನಿಲರಗಳೆಯ ಲಕ್ಷಣವನ್ನೂ ಹಿಂದೆಯೇ ನೋಡಿರುವುದು ನೆನಪಿರಬಹುದು. ಅಲ್ಲಿ ನಡುವೆ ಗುರ್ವಕ್ಷರವನ್ನುಳ್ಳ ಗಣ ಬರಕೂಡದು; ಬಂದರೆ ಪದ್ಯದ ಲಯ ಕೆಡುತ್ತದಂತೆ. ನಿಷಿದ್ಧವಾದ ಈ ಗಣವನ್ನು ಹಾಕಿ ಹರಿಹರ ಹೊಸ ಸೊಗಸನ್ನು ತಂದಿದ್ದಾನೆ. ಕೆಳಗಿನ ಕೆಲವು ಪಂಕ್ತಿಗಳು ಸಾಕು:

ಪಿನಾಕಿ ಕಳುಪಲ್ ಸುಖದಿಂದಲ್ಲಿಗೆ
ನೆಗೆದುವು **ವಿಮಾನ**ವಂಬರ ತಳದೊಳ್
ತಿರುನಾಳ್ಪೋವರ್ **ಮುಳುಂಗಿ** ನಿಂದಿರೆ

ನಾಲ್ಕು ಮಾತ್ರೆಯ ತಾಳ ಒಂದೇ ಗತಿಯಲ್ಲಿ ನಡೆಯುತ್ತ ಬೇಸರ ತೋರಿದಾಗ ನಿಷಿದ್ಧಗಣ ಬರುವುದು ಅದೆಷ್ಟು ಹಿತವಾಗಿದೆ! ಹರಿಹರನಿಗೆ ನಾದದ ಮೇಲೆ ಗಮನ. ರಾಗದ ಸುಳಿವು ಹೊಳವು ಗಳನ್ನು ಕೇಳಿ ಸುಖಪಡುವ ಶಕ್ತಿ ಅವನಲ್ಲಿದೆ. ಅದರ ರುಚಿ

ತಲೆಗೇರಿದಾಗ ಅವನನ್ನು ತಡೆಯಲು ಯಾವ ನಿಯಮವೂ ಸಮರ್ಥವಾಗಿಲ್ಲ. ಬೇರೊಂದು ಕಟ್ಟನ್ನು ಮಾಡುವ ಕೆಚ್ಚು ಅವನಿಗುಂಟು.

ಹರಿಹರನ ಕಲೆಯಲ್ಲಿಯೂ ಶೈಲಿಯಲ್ಲಿಯೂ ಸ್ಪಷ್ಟವಾದ ಬೆಳವಣಿಗೆ ಇದೆ. ಗಿರಿಜಾಕಲ್ಯಾಣವನ್ನೂ ರಗಳೆಗಳನ್ನೂ ಹೋಲಿಸಿ ನೋಡಿದರೆ ಈ ವಿಷಯ ಮನದಟ್ಟಾಗುತ್ತದೆ. ಒಂದರ ಕಥಾ ರಚನೆಯಲ್ಲಿ ಕೌಶಲ್ಯ ಕಡಮೆ, ಪಾತ್ರಗಳ ಗುಣ ಸ್ವಭಾವ ಪರಿಜ್ಞಾನ ಆಳವಾಗಿಲ್ಲ, ಹೊಸದಾಗಿ ನಿರ್ಮಿಸಿದ ಸಂದರ್ಭಗಳಲ್ಲಿ ಪ್ರತಿಭೆ ಮಿಂಚಿದ್ದರೂ ನಿರೂಪಣೆ ಹಿತವಾಗಿಲ್ಲ, ಬೇಡವಾದ ವರ್ಣನೆಗಳ ಹೊದರು ಹುಲುಸಾಗಿದೆ, ಪಾಂಡಿತ್ಯ ಪ್ರದರ್ಶನದ ಆಸೆ ಹಿರಿದಾಗಿದೆ; ಇನ್ನೊಂದರಲ್ಲಿ ಸಂವಿಧಾನ ಕೌಶಲ್ಯ ಹೊಳೆಯುತ್ತಿದೆ, ಪಾತ್ರಗಳ ಹೃದಯವ್ಯಾಪಾರದ ತೀವ್ರಾನುಭವವಿದೆ, ಸನ್ನಿವೇಶ ನಿರೂಪಣೆಯಲ್ಲಿ ನಯವೂ ನಾಟಕೀಯತೆಯೂ ಹೆಚ್ಚು, ವರ್ಣನೆ ಮಿತವಾಗಿದೆ, ಪಾಂಡಿತ್ಯದ ಚಾಪಲ್ಯ ಮಾಯವಾಗಿ ಸರಳತೆಯ ಸೊಗಸು ಪ್ರತ್ಯಕ್ಷವಾಗಿದೆ. ಶತಕಗಳನ್ನು ಪರಸ್ಪರ ಹೋಲಿಸಿ ನೋಡಿದರೂ ಹೀಗೆಯೇ. ಒಂದರಲ್ಲಿ ಅವನು ಸಾಧಕನಾಗಿದ್ದರೆ ಇನ್ನೊಂದರಲ್ಲಿ ಸಿದ್ಧಪುರುಷನಾಗಿದ್ದಾನೆ. ಒಂದು ಕಸುಗಾಯಿ; ಇನ್ನೊಂದು ಮಾಗಿ ಮಗಮಗಿಸುತ್ತಿರುವ ಹಣ್ಣು. ಈ ಮಾತು ಅವನ ಆತ್ಮದ ಪ್ರಗತಿಗೆ ಅನ್ವಯಿಸುವ ಹಾಗೆಯೇ ಅವನ ಕಲೆಗೂ ಅನ್ವಯಿಸುವುದು.

೭. ಸಮಾಪ್ತಿ

ಇದುವರೆಗೆ ಹರಿಹರ ಕವಿಯ ಪರಿಚಯ ಆದಂತಾಯಿತು. ಮುಂದಕ್ಕೆ, ಈ ಕವಿ ಯಾವ ಎತ್ತರದಲ್ಲಿದ್ದಾನೆ, ಅವನ ಪ್ರಭಾವ ಇತರ ಕವಿಗಳ ಮೇಲೆ ಎಷ್ಟಿದೆ, ಸಾಹಿತ್ಯಕಲೆ ಅವನಿಂದ ಹೇಗೆ ಬೆಳೆಯಿತು ಎಂಬ ವಿಷಯಗಳನ್ನು ಸಂಗ್ರಹವಾಗಿ ಹೇಳಬಹುದು.

ಹರಿಹರನ ಕಾವ್ಯಗಳ ಮೇಲ್ಮೆಗೆ ಮುಖ್ಯ ಕಾರಣ ಅವುಗಳಿಂದ ಓದುವವರಲ್ಲುಂಟಾಗುವ ಭಾವಾವೇಶ ರಸಗಳು. ಇತರ ಹಲವು ಕವಿಗಳಂತೆ ಏನೋ ಬರೆಯಲು ಹೊರಟು ಮತ್ತೇನನ್ನೋ ಬರೆದಿಡುವುದಿಲ್ಲ ಅವನು. ವಿಷಯ ಏನು, ಹೇಗೆ ಹೇಳಬೇಕು, ಎಂಬುದು ಸದಾ ಅವನ ಕಣ್ಣಮುಂದೆ ಇರುತ್ತದೆ. ಕಥೆಯಲ್ಲಿನ ರಸಸ್ಥಾನ ಯಾವುದೆಂಬುದನ್ನು ಅವನು ಬಲ್ಲನು. ಅವನ ಗಮನ ಇದರ ಸುತ್ತ ಹಾರಾಡುತ್ತಿರುತ್ತದೆ. ಯಾವುದನ್ನು ಎಷ್ಟು ಹೇಳಬೇಕೆಂದು ಬಲ್ಲ ಕಲಾನಿಪುಣ ಹರಿಹರ. ಇದೊಂದರಿಂದಲೇ ಅವನ ಕಾವ್ಯ ಓದಲು ಹಿತವಾಗಿರುತ್ತದೆ. ಪಾತ್ರಪೋಷಣೆ, ಹೇಳುವುದನ್ನು ಹತ್ತುಸಲ ಬೇರೆಬೇರೆ ರೀತಿಯಿಂದ ಹೇಳಿ ಮನಸ್ಸಿನ ಭಿತ್ತಿಯ ಮೇಲೆ ಚಿತ್ರ ಬರೆಯುವ ಶಕ್ತಿ, ಕರೆಯೇರಿ ಮೀರಿ ಬರುವ ಸ್ಫೂರ್ತಿಯ ಹೊನಲು, ಮಾತುಗಳ ಠೀವಿ, ಕಲ್ಪನೆಯ ಬೆಡಗು—ಇವೆಲ್ಲ ಕವಿಗೆ ವಿಶಿಷ್ಟವಾದ ವ್ಯಕ್ತಿತ್ವವನ್ನು ಕೊಟ್ಟಿವೆ, ಅವನ ಸಂಪರ್ಕದಿಂದ ನಮ್ಮ ಹೃದಯ ಗಂಗಾಸ್ನಾನ ಮಾಡಿದಂತಾಗುತ್ತದೆ. ವಿರೂಪಾಕ್ಷನ ವರಪ್ರಸಾದದಿಂದ ಬಂದ ಅವನ ವಾಣಿಯಲ್ಲಿ ಕನ್ನಡದ ಸತ್ವ ಅರಳಿ ಪರಿಮಳಿಸುತ್ತಿದೆ. ಅದು ನಮ್ಮನ್ನು ಮಂತ್ರದಂತೆ ವಶಪಡಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ.

ಜೈನಕವಿಗಳಲ್ಲಿ ಪಂಪನಿಗೆ ಯಾವ ಮರ್ಯಾದೆ ಇದೆಯೋ ಅದೇ ಮನ್ನಣೆ ವೀರಶೈವ ಕವಿಗಳಲ್ಲಿ ಹರಿಹರನಿಗೆ ಸಂದಿದೆ. ಅವನ ಅನಂತರ ಬಂದ ಅನೇಕ ಶಿವಕವಿಗಳು ಅವನ ಪಾದಕ್ಕೆ ಒಂದು ಹೂವನ್ನು ಹಾಕಿ ನಮಸ್ಕಾರ ಮಾಡಿದ ಹೊರತು ಕಾವ್ಯರಚನೆಗೆ ಕೈಹಾಕರು. ಇದಕ್ಕೆ ಕಾರಣ ಅವನು ಶಿವಕವಿಯಾಗಿರುವುದೊಂದೇ ಅಲ್ಲ, ಅವನ ಕವಿತೆಯು ಮಾರ್ಗ ರಸಸ್ಯಂದಿಯಾಗಿಯೂ ಇರುವುದು. ರಾಘವಾಂಕನಿಂದ ಹಿಡಿದು ಹಲವು ವೀರಶೈವ ಕವಿಗಳು ಹರಿಹರನ ಪ್ರಭಾವಕ್ಕೆ ಒಂದಲ್ಲ ಒಂದು ರೀತಿಯಿಂದ ಒಳಪಟ್ಟಿದ್ದಾರೆ. ರಾಘವಾಂಕನಂತೂ ಹರಿಹರನ ಶಿಷ್ಯ, ಸೋದರಳಿಯು. ಅವನ ಕಾವ್ಯಗಳ ಮುಖ್ಯ ಪ್ರೇರಕಶಕ್ತಿ ಹರಿಹರನಿಂದ ಬಂದದ್ದು. ಅವನಿಗೆ ಆಚಾರ್ಯನಾಗಿ, ಅವನ ಪ್ರತಿಭೆಯ ಹೂವನ್ನು ಅರಳಿಸುವ ಎಳಬಿಸಿಲಾಗಿ ಅವನ ಸಂಪೂರ್ಣ ಜೀವನವನ್ನೇ ಉಚಿತರೀತಿಯಲ್ಲಿ ಪರಿವರ್ತನಗೊಳಿಸಿದ ಮಹಾನುಭಾವ ಹರಿಹರ. ಸುರಂಗ, ಷಡಕ್ಷರಿ, ಬೊಮ್ಮರಸ, ವಿರೂಪಾಕ್ಷ ಪಂಡಿತ ಮುಂತಾದ ಕವಿಗಳು ಹರಿಹರನ ಮಾರ್ಗವನ್ನೂ ಶೈಲಿಯನ್ನೂ ವಸ್ತುವನ್ನೂ ಅವಲಂಬಿಸಿದ್ದಾರೆ. ಆದರೆ ಅವನ ಪ್ರತಿಭೆ ಇವರಿಗೆ ಇಲ್ಲದೆ ಇದ್ದುದರಿಂದ ಎಷ್ಟು ಪಾಂಡಿತ್ಯವಿದ್ದರೂ ಅವನನ್ನು ಮೀರಿಸಲಾರದೆ ಹೋದರು. ಅನೇಕ ಕವಿಗಳಿಗೆ ಮಾರ್ಗದರ್ಶಕನಾಗುವ ಸುಯೋಗ ಹರಿಹರನಿಗೆ ಉಂಟಾಗಿದೆ.

ಸಾಹಿತ್ಯಕಲೆಗೆ ಅವನಿಂದ ಆಗಿರುವ ಪ್ರಯೋಜನ ಹಲವು ರೀತಿಯಾಗಿದೆ. ಚಂಪೂ ಪದ್ಧತಿಯನ್ನು ಬಹುಶಃ ಹಿಮ್ಮೆಟ್ಟಿಸಿದವನು, ಅದರ ಪ್ರಚಾರವನ್ನು ಕುಗ್ಗಿಸಿದವನು ಹರಿಹರ. ಹಣವಂತರ ಮನೆಯ ಬಡ ತೊತ್ತಿನಂತೆ ಬಿದ್ದಿದ್ದ ರಗಳೆಯನ್ನು ಕೈಹಿಡಿದು ಅದಕ್ಕೆ ಜೀವದಾನ ಮಾಡಿ ತಲೆಯೆತ್ತಿ ನಡೆಯುವಂತೆ

ಮಾಡಿದವನು ಅವನು. ತನ್ನ ಆವೇಶ ಬಿಗಿ ಧೋರಣೆ ಹೊಳಪು ಗಳಿಂದ ಗದ್ಯಶೈಲಿಯನ್ನು ಅವನು ಬೆಳಗಿದನು. ಅದು ಚಂಪೂ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ನೀರಸವಾದ ಸತ್ತ ಮಾತು ಗಳ ಸಮುದಾಯವಲ್ಲ; ಆದರಲ್ಲಿ ತೇಜಸ್ಸಿದೆ, ಸತ್ವವಿದೆ. ಹೀಗೆ ಗದ್ಯಪದ್ಯಗಳಲ್ಲಿ ಅವನು ತೋರಿಸಿರುವ ದಾರಿ ಅವನ ಸ್ವಾತಂತ್ರ್ಯ ರಮಣೀಯಂತೆಗಳನ್ನೂ ಕವಿತಾವಿವೇಕವನ್ನೂ ಸಾರುತ್ತಿದೆ. ಅವನು ಸಲ್ಲಿಸಿರುವ ಸೇವೆ ಇಲ್ಲಿಯವರೆಗೂ ಕಾಣುವ ಹಾಗೆ ನಿಂತಿದೆ. ತನ್ನ ಕಾಲದ ಸಾಹಿತ್ಯಕ್ಕೆ ಸೀಮಾ ಪುರುಷ ಹರಿಹರ. ಕನ್ನಡ ಸಾಹಿತ್ಯ ಮಂದಿರದ ಚಿನ್ನದ ಕಲಶಗಳಲ್ಲಿ ಅವನು ಒಬ್ಬನು. ಬಹು ಎತ್ತರದಲ್ಲಿ ನಿಂತು ಆ ಕಲಶ ತನ್ನ ಕಾಂತಿಯನ್ನು ಎಲ್ಲ ದಿಕ್ಕು ಗಳಿಗೂ ಚೆಲ್ಲಿ ನಾಡಮೇಲೆಲ್ಲ ಬೆಳುದಿಂಗಳನ್ನು ಹರಡಿದೆ. ಅದು ಎಂದೂ ಮಸುಳದೆ ನಿಲ್ಲಲಿ; ಕನ್ನಡ ಜನತೆಗೆ ಹೆಮ್ಮೆಯ ಕೀರ್ತಿ ಸ್ತಂಭವಾಗಿರಲಿ.

ಪರಿಶಿಷ್ಟ

ಕವಿಯ ವಿಷಯ

ಹರಿಹರ ಕವಿಯ ಕೀರ್ತಿಯನ್ನು ಕಂಡವರಿಗೆ ಅವನು ಯಾರು, ಯಾವಾಗ ಇದ್ದನು, ಅವನ ಚರಿತ್ರೆ ಏನು ಎಂಬಿವೇ ಮುಂತಾದ ವಿಷಯಗಳನ್ನು ತಿಳಿಯುವ ಕುತೂಹಲ ಹುಟ್ಟಬಹುದು. ಕವಿ ತನ್ನ ವಿಷಯವನ್ನು ಹೆಚ್ಚಾಗಿ ಹೇಳಿಕೊಂಡಿಲ್ಲ. ಕಾವ್ಯಗಳನ್ನು ಯಾವಾಗ ಬರೆದನೆಂಬುದನ್ನೂ ತಿಳಿಸಿಲ್ಲ. ಆದ್ದರಿಂದ ಅನೇಕ ಕಥೆಗಳೂ ಊಹೆಗಳೂ ಹುಟ್ಟಲು ಕಾರಣವಿದೆ. ಈಗಿನ ಸಂಶೋಧಕರು ಅವನ ಕಾಲ ಮುಂತಾದ ವಿಷಯಗಳನ್ನು ಗೊತ್ತು ಹಚ್ಚಲು ಪ್ರಯತ್ನಿಸುತ್ತಿದ್ದಾರೆ.

ಅವನ ಗ್ರಂಥಗಳಿಂದ ಗುರುಪರಂಪರೆ ತಿಳಿದುಬರುತ್ತದೆ. ಹಂಪೆಯ ಶಂಕರದೇವ; ಅವನ ಶಿಷ್ಯ ಮಾದಿರಾಜ; ಶಿಷ್ಯೆ ಮಾಯಿದೇವಿ; ಇವನ ಶಿಷ್ಯನೇ ಹಂಪೆಯ ಹರಿಹರ. ಈ ಗುರುಗಳೆಲ್ಲ ಶೈವಾಗಮಸಂಪನ್ನರೆಂದೂ ಶಾಂತಮೂರ್ತಿಗಳೆಂದೂ ಹರಿಹರನ ಮಾತುಗಳಿಂದ ವ್ಯಕ್ತವಾಗುತ್ತದೆ. ಇವರು ಹಂಪೆಯಲ್ಲಿಯೇ ಇದ್ದವರೆಂದು ಕಾಣುತ್ತದೆ.

ಹರಿಹರ ಬ್ರಹ್ಮಚಾರಿಯಾಗಿದ್ದನೆಂದು ಕೆಲವರು ಹೇಳುತ್ತಾರೆ. ಆದರೆ ಅವನಿಗೆ ಮದುವೆಯಾಗಿತ್ತೆಂದೂ ಎಲ್ಲರಂತೆ ಅವನೂ ಸಂಸಾರಿಯಾಗಿದ್ದನೆಂದೂ ಹೇಳಲು ಅವಕಾಶವಿದೆ. ಅವನ 'ಪುಷ್ಪರಗಳೆ' ಅವನ ಆತ್ಮಕಥೆಯಾಗಿರುವುದೆಂದು ಯಾರಿಗಾದರೂ ಭಾವನೆ ಉಂಟಾಗದಿರದು. ಹಾಗೆಯೇ ಅವನ 'ಪಿಂಡೋತ್ಪತ್ತಿ ರಗಳೆ'ಯಲ್ಲೂ ಶತಕಗಳ ಕೆಲವು ಪದ್ಯಗಳಲ್ಲೂ ಆತ್ಮಕಥೆ, ಕೊಂಚ ಇರುವಂತೆ ಕಾಣುತ್ತದೆ; ಅವುಗಳಲ್ಲಿ ಅವನು

ಜೀವನದಲ್ಲಿ ಪಟ್ಟ ಕಷ್ಟ ಹೊಳಲುಕೊಡುತ್ತಿದೆ. ಈ ಆಧಾರದ ಮೇಲೆ, ಅವನು ಒಂದಾನೊಂದು ಕಾಲದಲ್ಲಿ ಸಂಸಾರಿಯಾಗಿದ್ದ ನೆಂದೂ ಅನಂತರ ವಿರಕ್ತಿ ಬಂದು ಕಾವ್ಯಯೋಗಿಯಾದನೆಂದೂ ಹಿಂದೆ ಹೇಳಿದೆ. ಭಾವಗೀತೆಗಳಂತಿರುವ ಆ ರಗಳೆಯೂ ಶತಕಗಳ ಪದ್ಯಗಳೂ ಓದುವವರಲ್ಲಿ ಈ ಅಭಿಪ್ರಾಯವನ್ನು ಮೂಡಿಸದೆ ಇರವು. ಇದನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ಬಗೆಯ ಕುಂದನ್ನೂ ಹರಿಹರನಿಗೆ ಮಾಡಿದ ಹಾಗಾಗುವುದಿಲ್ಲ. ಅವನ ಕಾವ್ಯಗಳಲ್ಲಿರುವ ಅಸಾಧಾರಣವಾದ ಲೋಕಾನುಭವ ಜೀವನದ ಕುಲುಮೆಯಲ್ಲಿ ಕಾದುಕಾದು ಪೆಟ್ಟು ತಿಂದುದರ ಪರಿಣಾಮ ವೆಂದು ತೋರದೆ ಇರಲಾರದು.

ಇನ್ನು ಹರಿಹರ ಯಾವಾಗ ಇದ್ದನೆಂಬ ವಿಷಯ ಚರ್ಚೆ ಇನ್ನೂ ನಡೆಯುತ್ತಿದೆ. ಕ್ರಿ. ಶ. ೧೧೬೫ ರಿಂದ ಹಿಡಿದು ೧೩೦೦ರ ವರೆಗೆ ಅವನ ಕಾಲ ಓಡಾಡುತ್ತಿದೆ. ಹರಿಹರ ಬೇಲೂರಿನಲ್ಲಿ ಕರಣಿಕನಾಗಿದ್ದಾಗ ಹಂಪೆಯಲ್ಲಿ ವಿರೂಪಾಕ್ಷನ ದೇವಾಲಯದ ತೆರೆಗೆ ಉರಿ ಮುಟ್ಟಿದಂತೆಯೂ ಅದನ್ನು ಕೈಗಳಿಂದ ಒರಸಿ ಅವನು ಆರಿಸಿದಂತೆಯೂ ಸಿದ್ಧನಂಜೇಶನೆಂಬೊಬ್ಬ ಕವಿಯ ಹೇಳಿಕೆ. ಇದು ನಡೆದ ವರ್ಷ ಮಾಸ ತಿಥಿ ವಾರಗಳನ್ನು ಅವನು ಕೊಟ್ಟಿದ್ದಾನೆ. ಇದರಂತೆ ಗುಣಿಸಿ ನೋಡಿ ಈ ಸಂಗತಿ ಕ್ರಿ. ಶ. ೧೨೧೬ರಲ್ಲಿ ನಡೆದಿರಬೇಕೆಂದು ಕಂಡು ಹಿಡಿದು ಹರಿಹರನಿಗೆ ಅದೇ ಕಾಲವನ್ನು ಕೊಟ್ಟಿದ್ದಾರೆ. ಇದು ಕಥೆಯಾಗಿರುವುದರಿಂದ ನಂಬಬೇಕೋ ಬಿಡಬೇಕೋ ತಿಳಿಯದು. ಹರಿಹರನು ಏಕಾಂತ ರಾಮಯ್ಯನೆಂಬ ಒಬ್ಬ ಶಿವಭಕ್ತನನ್ನು ಕುರಿತು ರಗಳೆ ಬರೆದು ಅದರಲ್ಲಿ ಅವನು ಮಾಡಿದ ಕೆಲಸಗಳನ್ನು ವರ್ಣಿಸಿ ಅವನನ್ನು ಕೈಲಾಸಕ್ಕೆ ಕಳಿಸಿದ್ದಾನೆ. ಆ ಭಕ್ತ ೧೨೦೩ರಲ್ಲಿ ಜೀವಿಸುತ್ತಿದ್ದಂತೆ

ಅಬ್ಬಲೂರು ಶಾಸನದಿಂದ ತಿಳಿದುಬರುತ್ತದೆ. ಅವನು ಗತಿಸಿದ ಮೇಲೆ ಹರಿಹರ ಆ ರಗಳೆಯುನ್ನು ಬರೆದಿರಬೇಕು. ಎಂದರೆ ೧೨೦೩ ರಿಂದ ಈಚೆಗೆ ಅವನು ಇದ್ದಿರಬೇಕೆಂದಾಗುತ್ತದೆ. ಅವನು ಬಲ್ಲಾಳನಲ್ಲಿ ಕರಣಿಕನಾಗಿದ್ದುದು ನಿಜವಾಗಿದ್ದರೆ ಆ ಕಾಲದಲ್ಲಿ ಆಳುತ್ತಿದ್ದ ಬಲ್ಲಾಳನು ೧೧೨೭ ರಿಂದ ೧೨೩೫ ರವರೆಗೆ ಆಳಿದ ವೀರನರಸಿಂಹಬಲ್ಲಾಳನಾಗಿರಬೇಕು. 'ವೀರನರಸಿಂಹ ಭೂವರ' ಎಂದು ಬೇರೆ ಗ್ರಂಥಗಳಲ್ಲೂ ಹೇಳಿದೆ. ಹರಿಹರನು ಈ ಹೊಯ್ಸಳ ರಾಜನ ಆಳಿಕೆಯಲ್ಲಿ ಬಾಳಿರಬೇಕೆಂದು ಕಾಣುತ್ತದೆ. ೧೩ನೆಯ ಶತಮಾನದ ಪೂರ್ವಾರ್ಧದಲ್ಲಿ ಅವನ ಕಾವ್ಯರಚನೆ ನಡೆದಿರಬೇಕು. ಇದರ ನಿರ್ಣಯ ಖಚಿತವಾಗಿ ಮುಂದೆ ಆಗಬೇಕಾಗಿದೆ.

ಮುಂದಕ್ಕೆ ಓದಬಹುದಾದ ಪುಸ್ತಕಗಳು

೧. ಹರಿಹರದೇವ—ಕರ್ಣಾಟಕ ಸಂಘ, ರಾಜಾರಾಮಕಾಲೇಜು, ಕೊಲ್ಲಾಪುರ.

೨. ಗಿರಿಜಾಕಲ್ಯಾಣ—ಕಾವ್ಯಕಲಾನಿಧಿ ಮುದ್ರಣ; ಶಿ. ಚ. ನಂದಿಮಠ, ಎಂ.ಎ., . ಪಿಎಚ್.ಡಿ. (ಲಂಡನ್) ಅವರು ಸಂಪಾದಿಸಿದ್ದು.

೩. ಪಂಪಾಶತಕ—ಕಾವ್ಯಕಲಾನಿಧಿ ಮುದ್ರಣ.

೪. ರಕ್ಷಾಶತಕ—ಶ್ರೀ ಎನ್. ಆರ್. ಕರಿಬಸಪ್ಪಶಾಸ್ತ್ರಿಗಳು ಸಂಗ್ರಹಿಸಿದ್ದು, ೧೯೦೫.

೫. ಹರಿಹರನ ರಗಳೆಗಳು—ಏಳು ಭಾಗಗಳು: ರಾ॥ಬ॥ಪಿ.ಜಿ. ಹಳಕಟ್ಟಿ: ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೬. ಬಸವರಾಜದೇವರ ರಗಳೆ— ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು ಸಂಪಾದಿಸಿದ್ದು.

೭. ಮಹಾದೇವಿಯಕ್ಕನ ರಗಳೆ—ಶ್ರೀ ಚನ್ನಮಲ್ಲಿಕಾರ್ಜುನರು ಸಂಪಾದಿಸಿದ್ದು.

ಕೆ.ಸ. ೨೧೮೮೩ ಎಂಯುಪಿಎಂ—೧೦,೦೦೦ ಪ್ರತಿಗಳು—೨೫—೧—೮೪

ಕೆಲವು ಸಾಹಿತ್ಯ ಕೃತಿಗಳು

ಬೆಲೆ : ೨೫ ಪೈಸೆಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ॥ ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ॥ ಹಿರಣ್ಮಯಿ

೨೭. ವೇಮನ—ಕೆ. ವೆಂಕಟರಾಮಪ್ಪ

೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ॥ ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ

೩೦. ಕಾಳಿದಾಸನ ನಾಟಕಗಳು—ಡಾ॥ ಕೆ. ಕೃಷ್ಣಮೂರ್ತಿ

೩೧. ಅಣ್ಣನ ಆದರ್ಶ—ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ

೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ

೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ

೩೪. ಜನ್ನ—ಡಾ॥ ಸಿ. ಪಿ. ಕೃಷ್ಣಕುಮಾರ್

೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ

೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೩೭. ನಿಜಗುಣ ಶಿವಯೋಗಿ—ಎಚ್. ಗಂಗಾಧರನ್

೩೮. ಮುದ್ರಾರಾಕ್ಷಸ—ಡಾ॥ ಎನ್. ಎಸ್. ಅನಂತರಂಗಾಚಾರ್

೩೯. ರಾಘವಾಂಕ—ರಾಮೇಗೌಡ

೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ

೪೧. ನಾಗಚಂದ್ರ—ಡಾ॥ ಸಿ. ಪಿ. ಕೃಷ್ಣಕುಮಾರ್

೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ

೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ

೪೬. ಕವಿ ಶ್ರೀಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೪೭. ಕಬೀರದಾಸ—ಡಾ॥ ಹಿರಣ್ಮಯಿ

೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ

೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ

೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ

೫೧. ಪೊನ್ನ—ಎನ್. ಅನಂತರಂಗಾಚಾರ್

೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ

೫೩. ದೇವರ ದಾಸಿಮಯ್ಯ—ಕೆ. ಅನಂತರಾಮು

೫೪. ಸಂಸ್ಕೃತ ಸಾಹಿತ್ಯ—ಡಾ॥ ಆರ್. ಎಸ್. ಶಿವಗಣೇಶಮೂರ್ತಿ

೫೫. ಚಾಮುಂಡರಾಯ—ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ

೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ

೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ